1. ವಿಷಯ: ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ಕಳಸಾ ಹೋಬಳಿ ಇನಾಂ ಭೂಮಿ ಸಾಗುವಳಿ ತೆರವು ಕಾರ್ಯಾಚರಣೆ ಆರಂಭಿಸಿರುವುದರಿಂದ ರೈತ ಕುಟುಂಬಗಳಿಗೆ ತೊಂದರೆಯುಂಟಾಗುತ್ತಿರುವ ಬಗ್ಗೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ರಾಮನಗರ): ಮಾನ್ಯ ಅಧ್ಯಕ್ಷರೆ, ಈ ಕಳಸಾ ಭಾಗಕ್ಕೆ ಸಂಬಂಧಿಸಿದಂತೆ ಹಳೆಯ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಸಮಯವಿಲ್ಲ, ನಾನು ಶಾರ್ಟ್ ಆಗಿ ಹೇಳುತ್ತೇನೆ. ನಾನು ಈಗಾಗಲೇ ಕಳಸಾ ಭಾಗದಲ್ಲಿ ಪ್ರವಾಸ ಮಾಡಿ ಅದಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಸರ್ಕಾರಕ್ಕೆ ಪತ್ರದ ಮೂಲಕ ಎಲ್ಲಾ ದಾಖಲೆಗಳನ್ನು ಕಳುಹಿಸಿಕೊಟ್ಟಿದ್ದೇನೆ. ಈಗ ಇಲ್ಲಿ ಪ್ರಶ್ನೆ ಉದ್ಭವವಾಗಿರುವುದು 2012 ಏಪ್ರಿಲ್ ತಿಂಗಳಿನಲ್ಲಿ ಹೈಕೋರ್ಟಿನಲ್ಲಿ ಒಂದು ತೀರ್ಪು ಏನೆಂದು ಕೊಡುತ್ತಾರೆ ಅದರ ಹಿನ್ನೆಲೆಯಲ್ಲಿ ಈ ಸಮಸ್ಯೆಗಳೆಲ್ಲಾ ಉದ್ಭವವಾಗಿವೆ. ಹೈ ಕೋರ್ಟಿನ ತೀರ್ಪಿನಲ್ಲಿ ಒಂದು ಅವಕಾಶವನ್ನು ಕೊಟ್ಟಿದ್ದರು. ಆ ಭಾಗದಲ್ಲಿ 1925ರಲ್ಲಿ ಯಾವ ಒಂದು ಭೈರೇಶ್ವರ ದೇವಸ್ಥಾನಕ್ಕೆ ಸೇರಿದ 6777 ಎಕರೆ ಇನಾಂತಿ ಜಮೀನನ್ನು ಅಲ್ಲಿರುವ ಮರಗಳನ್ನು ಕಾಪಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಕಳ್ಳತನವಾಗುತ್ತದೆ ಎನ್ನುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಅದನ್ನು ನೋಡಿಕೊಳ್ಳುವುದಕ್ಕೆ ಒಂದು ವರ್ಷ ಕೊಡುವುದಕ್ಕೆ ತೀರ್ಮಾನ ಮಾಡುತ್ತಾರೆ. ಅದಾದ ಮೇಲೆ ಮೈಸೂರು ಅರಸರ ಗೆಜೆಟ್ ನೋಟಿಫಿಕೇಷನ್ ಮುಖಾಂತರ 6,777 ಎಕರೆ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡುತ್ತಾರೆ. ಅದಾದ ನಂತರ ಮುಂದೆ ಬಂದಂತಹ ಜನಪರ ಸರ್ಕಾರಗಳು ವರ್ಗಾವಣೆ ಮಾಡಿದವು.

ಅಧ್ಯಕ್ಷರು: ವರ್ಗಾವಣೆ ಮಾಡಿದ್ದಾರೆಂದು ಹೇಳುತ್ತೀದ್ದೀರಲ್ಲ? ಅದಕ್ಕೆ ನಿಮ್ಮ ಹತ್ತಿರ ಏನು ಆಧಾರ ಇದೆ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಅದನ್ನು ಮೈಸೂರು ಅರಸರು ಮಾಡಿದ್ದಾರೆ.

ಅಧ್ಯಕ್ಷರು: ಅಂದರೆ, ಸರ್ಕಾರದ ಆಜ್ಞೆ ಇದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: 1928ನೇ ಇಸವಿಯ ಮೈಸೂರು ಅರಸರ ಗೆಜೆಟ್ ನೋಟಿಫಿಕೇಷನ್ ಇದೆ. ಆದರೆ ಆ ಗೆಜೆಟ್ ನೋಟಿಫಿಕೇಷನ್ ನಲ್ಲಿ ಇರುವುದೇನಿದೆ, ಅದಾದ ನಂತರವೂ ಸರ್ಕಾರದ ಮುಖಾಂತರ ಹಲವಾರು ಕಾನೂನು ವ್ಯಾಪ್ತಿಯೊಳಗೆ ಅವರಿಗೆ ಜಮೀನು ಅಲಾಟ್ಮೆಂಟ್ ಮಾಡಿದ್ದಾರೆ, ಅವರಿಗೆ ಜಮೀನು ಕೊಟ್ಟರು.

ಅಧ್ಯಕ್ಷರು: ಯಾವ ಬೇಸಿಸ್ ಮೇಲೆ ಕೊಟ್ಟರು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಅದಕ್ಕೆ ಬೇಸಿಸ್ ಯಾವುದೆಂದರೆ, ನಮ್ಮ ಜಿಲ್ಲಾಧಿಕಾರಿಗಳಿರಬಹುದು, ಟ್ರಿಬ್ಯುನಲ್‌ಗಳಿರಬಹುದು, ಇವರೆಲ್ಲಾ ಕೊಟ್ಟಿದ್ದಾರೆ, ಅವರು ಸರ್ಕಾರಿ ಭೂಮಿಯೋ ಅರಣ್ಯ ಭೂಮಿಯೋ ಎನ್ನುವುದನ್ನು ನೋಡುವುದಕ್ಕೆ ಹೋಗಲಿಲ್ಲ. ಆದರೆ ಇದು ಅರಣ್ಯ ಭೂಮಿ ಎಂದು ಮೊದಲನೆ ಬಾರಿಗೆ ಯಾವಾಗ ವಿಷಯ ಹೊರಗೆ ಬಂತೆಂದರೆ, 1997–98ರಲ್ಲಿ ಅಲ್ಲಿ ಮರ ವ್ಯಾಪಾರ ಮಾಡುವವರು ಯಾರಿದ್ದಾರೆ, ಅವರಲ್ಲಿ ಒಂದು ವಿವಾದ ಬಂದು ಅವರು ಹೈಕೋರ್ಟಿಗೆ ಹೋದರು. ಅದರ ಹಿನ್ನೆಲೆಯಲ್ಲಿ ಇದು ಅರಣ್ಯ ಭೂಮಿ ಎನ್ನುವುದನ್ನು ಆಗ ಅರಣ್ಯ ಇಲಾಖೆಯವರು ಹೈ ಕೋರ್ಟಿನ ಮುಂದೆ ಹೇಳುತ್ತಾರೆ, ಇಲ್ಲದಿದ್ದರೆ ಈ ಸಮಸ್ಯೆ ಉದ್ಭವವೇ ಆಗುತ್ತಿರಲಿಲ್ಲ. ಅಲ್ಲಿಂದ ಇದು ಪ್ರಾರಂಭವಾಗಿ ಇವತ್ತು ಈ ರೈತರನ್ನು ಒಕ್ಕಲೆಬ್ಬಿಸತಕ್ಕಂಥ ಕೆಲಸ ಪ್ರಾರಂಭವಾಗಿದೆ. ನಮ್ಮ ಸರ್ಕಾರದ ಅರಣ್ಯ, ಪೋಲಿಸ್ ಇಲಾಖೆಗಳವರು ನೋಟಿಸ್ ಕೊಟ್ಟು ನಾಳೆಯಿಂದ ತೆರವುಗೊಳಿಸತಕ್ಕ ಕೆಲಸಕ್ಕೆ ಏನು ಹೊರಟಿದ್ದಾರೆ, ಈಗ ಈ ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಒಂದು ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಆ ಪ್ರಸ್ತಾವನೆ ಏನೆಂದರೆ, ಇವತ್ತು ಕುದುರೆಮುಖದ ಭಾಗದಲ್ಲಿ ಹಿಂದೆ 2700 ಎಕರೆ ಸರ್ಕಾರಿ ಭೂಮಿಯನ್ನು ಕುದುರೆ ಮುಖಕ್ಕೆ ಲೀಸ್ ಬೇಸಿಸ್ ಮೇಲೆ ಕೊಟ್ಟಿದ್ದರು, ಇವತ್ತು ಸರ್ಕಾರ ಅದನ್ನು ವಶಪಡಿಸಿಕೊಂಡಿದ್ದಾರೆ, ಅದು ಪುನ: ಸರ್ಕಾರಕ್ಕೆ ಬಂದಿದೆ. ಇಲ್ಲಿ ಸುಮಾರು 826 ಎಕರೆ ಜಮೀನು ಕಳಸಾ ಇನಾಂ, ಅರಣ್ಯ ವ್ಯಾಪ್ತಿಯಲ್ಲಿ ಬರುವುದೇನಿದೆ, ಇದನ್ನು ಮಂಜೂರಾತಿ ಏನು ಮಾಡಿದ್ದಾರೆ, ಈ 826 ಎಕರೆಗೆ ಸಂಬಂಧಿಸಿದಂತೆ ಸರ್ಕಾರದ ಕುದುರೆಮುಖದ ಪಕ್ಕದಲ್ಲೆ 2700

ಎಕರೆ ಜಮೀನು ಇರುವುದು. ಈ ಭೂಮಿಯನ್ನು ಅರಣ್ಯ ಇಲಾಖೆಗೆ ಕೊಡುವುದರ ಮೂಲಕ ಇವತ್ತು ಈ ರೈತರನ್ನು ಉಳಿಸುವುದಕ್ಕೆ ಅವಕಾಶವೇನಿದೆ, ಈ ಕೆಲಸ ಮಾಡಬೇಕೆನ್ನುವುದಕ್ಕೆ ಈಗಾಗಲೇ ಡಿಸಿಯವರು ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಈ ಬಗ್ಗೆ ಸರ್ಕಾರ ಗಮನಹರಿಸಿ, ಇವತ್ತು ನಾಳೆಯಿಂದ ಅಲ್ಲಿರುವ ರೈತರನ್ನು ನೋಟಿಸ್ ಕೊಟ್ಟು ಒಕ್ಕಲೆಬ್ಬಿಸಲು ಏನು ಹೊರಟಿದ್ದಾರೆ, ಅಲ್ಲಿ 620 ವಾಸದ ಮನೆಗಳಿವೆ.

ಅಧ್ಯಕ್ಷರು: ನಾನೊಂದು ಮಾತನ್ನು ಹೇಳುತ್ತೇನೆ, ಈ Scheduled Tribe ಪ್ರಾರಂಭಿಕ ಅರಣ್ಯ ಕಾನೂನು ಬಂದಿದೆಯಲ್ಲಾ, ಅದರಲ್ಲಿ ಪ್ರತಿಯೊಂದು ಗ್ರಾಮಕ್ಕೊಂದು ಅರಣ್ಯ ಹಕ್ಕು ಸಮಿತಿಯನ್ನು ರಚನೆ ಮಾಡಿದ್ದಾರೆ. ಯಾರ್ಯಾರಿಗೆ ಈ ಆಪತ್ತು ಬಂದಿದೆಯಲ್ಲಾ ಅವರಿಂದ ಆ ಸಮಿತಿಗೆ ಅರ್ಜಿ ಕೊಟ್ಟು ಒಂದು endorsement ತೆಗೆದುಕೊಳ್ಳಲಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಅಧ್ಯಕ್ಷರೆ, ಸರ್ಕಾರ ಈಗ ಅವರನ್ನು ಒಕ್ಕಲೆಬ್ಬಿಸದಿರುವ ಕೆಲಸವನ್ನು ಪ್ರಾರಂಭ ಮಾಡಬೇಕಲ್ಲ?

ಅಧ್ಯಕ್ಷರು: ನೋಡಿ, ಕಾನೂನಿನಲ್ಲಿದೆ, ಒಂದು ಸಾರಿ ಅವರು ಅರ್ಜಿಯನ್ನು ಕೊಟ್ಟರೆ ಅದು ಅಂತಿಮವಾಗಿ ತೀರ್ಮಾನವಾಗುವವರೆವಿಗೂ ಅವರನ್ನು ಒಕ್ಕಲೆಬ್ಬಿಸಲು ಆಗುವುದಿಲ್ಲ. ಒಂದು ವೇಳೆ ಮಾಡಿದರೆ ಅವರ ಮೇಲೆ ಪ್ರಾಸಿಕ್ಯೂಷನ್ ಹಾಕುವುದಕ್ಕೂ ನಿಮಗೆ ಅಧಿಕಾರವಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಅಧ್ಯಕ್ಷರೆ, ಸರ್ಕಾರ ಆ ರೀತಿ ಉತ್ತರ ಕೊಟ್ಟರೆ ಸಾಕು.

ಶ್ರೀ ಬಿ.ಬಿ. ನಿಂಗಯ್ಯ: ಮಾನ್ಯ ಅಧ್ಯಕ್ಷರೆ, ಮೊನ್ನೆಯಿಂದ ಆಗಲೇ ಮರ ಕಡಿಯುವುದಕ್ಕೆ ಶುರು ಮಾಡಿದ್ದಾರೆ, ಇವತ್ತು ಅಧಿವೇಶನ ಮುಗಿಯಲೆಂದು ಕಾಯುತ್ತಿದ್ದರು. ಇವತ್ತು ಸಂಜೆಯಿಂದ ಅಲ್ಲಿ PCCF, Chief Conservator ಎಲ್ಲಾ ಹೋಗಿ ಅಲ್ಲಿ ಜಮಾ ಆಗಿದ್ದಾರೆ, ನಾಳೆಯಿಂದ ಮತ್ತೆ ತೆರವುಗೊಳಿಸುವ ಕೆಲಸ ಪ್ರಾರಂಭವಾಗುತ್ತದೆ, ಆ ಕಾರಣಕ್ಕಾಗಿ ಬದಲಿ ಜಮೀನಿನ ಪ್ರಸ್ತಾವನೆ ಏನು ಸರ್ಕಾರಕ್ಕೆ ಬಂದಿದೆ, ಅದನ್ನು ಪರಿಶೀಲಿಸಲಿ.

ಅಧ್ಯಕ್ಷರು: ನಾನು ಅವತ್ತು ನಿಮಗೆ ಹೇಳಿದ್ದೆ, ಈ ಕೆಲಸ ಮಾಡಿಸಿದ್ದೀರಾ?

ಶ್ರೀ ಬಿ.ಬಿ. ನಿಂಗಯ್ಯ: ಸರ್, ಕಮಿಟಿಗಳೇ ಫಾರಂ ಆಗಿಲ್ಲ, ಅಲ್ಲಿ ಹೇಗೆ ಮಾಡುವುದಕ್ಕೆ ಬರುತ್ತದೆ? ಅರಣ್ಯ ಇಲಾಖೆ ಆ ವಿಚಾರದಲ್ಲಿ ಏನೂ ಕ್ರಮ ಕೈಗೊಂಡಿಲ್ಲ.

ಅಧ್ಯಕ್ಷರು: ನಿನ್ನೆ ಕಮಿಟಿ ಫಾರಂ ಮಾಡಿರುವ ಒಂದು ಲಿಸ್ಟ್ ಕೊಟ್ಟಿದ್ದಾರೆ, ನಿಮ್ಮ ಮೂಡಿಗೆರೆ ತಾಲ್ಲೂಕಿನ ಎಷ್ಟು ಹಳ್ಳಿಗಳಲ್ಲಿ ಕಮಿಟಿ ರಚಿಸಲಾಗಿದೆ ನೋಡಿ.

ಶ್ರೀ ಬಿ.ಬಿ. ನಿಂಗಯ್ಯ: ಸಮಾಜ ಕಲ್ಯಾಣ ಮತ್ತು ಕಂದಾಯ ಇಲಾಖೆಗಳು ಸೇರಿ ಮಾಡಬೇಕು, ಈವರೆವಿಗೂ ಮಾಡಲಿಲ್ಲ.

ಶ್ರೀ ಸಿ.ಟಿ. ರವಿ: ಇವರು ತೆರವುಗೊಳಿಸಲು ಹೊರಟಿರುವುದು unauthorized cultivation ಅಲ್ಲ.

ಅಧ್ಯಕ್ಷರು: ಈ ವಿಪತ್ತನ್ನು ತಪ್ಪಿಸುವುದಕ್ಕೆ ಹಾವಿಗೆ ಒಂದು ಬೇರು ಕೊಟ್ಟಂತಾಗುತ್ತದೆ, ಇದನ್ನು ಮಾಡಿ ನಿಲ್ಲಿಸಿಕೊಳ್ಳಿ, ಅದರ ಮೇಲೆಯೂ ಯಾರಾದರೂ ಕಿತ್ತರೆ, ಅವರ ಮೇಲೆ ಕೇಸ್ ಹಾಕಿ, ಎಸಿ, ಡಿಸಿ ಹೇಳಿದಂತೆ ಇದು ಸುಲಭವಿಲ್ಲ.

ಶ್ರೀ ಸಿ.ಟಿ. ರವಿ: Committee constitute ಮಾಡಬೇಕಾಗಿರುವುದು ಇನ್ನೂ ಆಗಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಅವತ್ತು ಹೈಕೋರ್ಟಿನಲ್ಲಿ ಆದೇಶ ಮಾಡಿದ್ದು ಏನಿದೆ ಅದರಲ್ಲಿ ಒಂದು ರಿಲೀಫ್ ಕೊಟ್ಟಿದ್ದರು, ಇಲ್ಲಿಯವರೆಗೆ ರಾಜ್ಯ ಸರ್ಕಾರ ರಿಲೀಫ್ ಕೊಟ್ಟಿರುವುದನ್ನು ಕೇಂದ್ರ ಸರ್ಕಾರದ ಮುಂದೆ ತೆಗೆದುಕೊಂಡು ಹೋಗಲಿಲ್ಲ. ತೆಗೆದುಕೊಂಡು ಹೋಗಿ ಕೇಂದ್ರ ಸರ್ಕಾರದ ಮನವೊಲಿಸಿಕೊಂಡಿದ್ದರೆ ಸರಿ ಆಗುತ್ತಿತ್ತು.

ಅಧ್ಯಕ್ಷರು: ಈಗ ಹೈಕೋರ್ಟಿನಲ್ಲಿ ಇತ್ತಲ್ಲಾ. ಹೈಕೋರ್ಟಿಗೆ, ಇಂಥ ಒಂದು ಕಾನೂನನ್ನು ಪಾರ್ಲಿಮೆಂಟ್ ಮಾಡಿದೆ, ಈ ಪ್ರಕಾರ ಅವರು ಅರ್ಜಿ ಹಾಕಿಕೊಂಡಿದ್ದಾರೆ, ಅವರನ್ನು ಒಕ್ಕಲೆಬ್ಬಿಸುವುದು ಬೇಡವೆಂದು ಒಂದು ಅಫಿಡವಿಟ್ ಅನ್ನು ತೆಗೆದುಕೊಂಡು ಯಾರಾದರು ಹಾಕಿದ್ದರೆ, ಆಗುತ್ತಿತ್ತು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮುಂದೆ ಹೋಗಬೇಕಾಗಿತ್ತು. ಹೈಕೋರ್ಟಿನವರು ಸರ್ಕಾರಕ್ಕೆ ಒಂದು ಸೂಚನೆ ಕೊಡುತ್ತಾರೆ. ಇವತ್ತು ಯಾರಿಗೆ ಕಾನೂನುಬದ್ಧವಾಗಿ ಜಮೀನು ಕೊಟ್ಟಿದ್ದೀರಿ ಅದನ್ನು ಉಳಿಸಿಕೊಳ್ಳುವುದಕ್ಕೆ ಕೇಂದ್ರ ಸರ್ಕಾರದ ಅರಣ್ಯ ಇಲಾಖೆಯವರ ಜೊತೆ ಚರ್ಚೆ ಮಾಡಿ ಇವರಿಗೆ ಅನುಕೂಲ ಮಾಡಿಕೊಳ್ಳತಕ್ಕಂಥದ್ದಕ್ಕೆ ಅವಕಾಶ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರ ಅದನ್ನು ರಿಜೆಕ್ಟ್ ಮಾಡಿದರೆ, ಆಗ ವಿಧಿ ಇಲ್ಲ ಅವರನ್ನು ಎವಿಕ್ಟ್ ಮಾಡಿ ಎಂದು ಹೇಳುತ್ತಾರೆ. ಆದರೆ ಒಂದು ವರ್ಷದಿಂದ ಕೇಂದ್ರ ಸರ್ಕಾರದ ಮುಂದೆ ನಾವು ಹೋಗದೇ ಸರ್ಕಾರ ಮತ್ತೊಮ್ಮೆ ಎಡವಿದೆ. ಅದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಕೇಂದ್ರದಲ್ಲಿ ನಮ್ಮವರೇ ಅರಣ್ಯ ಇಲಾಖೆ ಸಚಿವರಿದ್ದಾರೆ. ಮಾನ್ಯ ವೀರಪ್ಪ ಮೊಯಿಲಿಯವರು ಅರಣ್ಯ ಸಚಿವರಾಗಿದ್ದಾರೆ. ಈಗಲಾದರೂ ಆ ಒಂದು clause ಏನಿತ್ತು ಅದನ್ನು implement ಮಾಡಲಿಕ್ಕೆ ನಮ್ಮ ಮಂತ್ರಿಗಳ ಬಳಿ ಹೋಗಿ ಆ ಕೆಲಸ ಮಾಡಿಕೊಳ್ಳುವುದಕ್ಕೆ ಅನುಕೂಲ ಇದೆ. ನಾವು ಅದನ್ನು ಮಾಡದೇ ಏಕಾಏಕಿ ನೂರಾರು ವರ್ಷಗಳಿಂದ ಅಲ್ಲಿರತಕ್ಕಂತಹ ನಮ್ಮ ರೈತರನ್ನು ಇವತ್ತು ನಾಳೆ ಬೆಳಿಗ್ಗೆಯಿಂದ ಎವಿಕ್ಷನ್ ಮಾಡಿದರೆ ಅವರು ಎಲ್ಲಿಗೆ ಹೋಗಿ ಬದುಕಬೇಕು? ಅದಕ್ಕೋಸ್ಕರ ಸರ್ಕಾರ ನಾಳೆ ಎವಿಕ್ಷನ್ ಮಾಡತಕ್ಕಂತಹ ನಿರ್ಧಾರವನ್ನು ಅಧಿಕಾರಿಗಳು ಮಾಡಿದ್ದರೆ ಅದನ್ನು ತಕ್ಷಣ ನಿಲ್ಲಿಸತಕ್ಕಂತಹ ಆದೇಶವನ್ನು ಸರ್ಕಾರ ಅವರಿಗೆ ಕೊಡಬೇಕು. ಮಾನ್ಯ ಅರಣ್ಯ ಇಲಾಖೆ ಸಚಿವರು ಹಾಗೂ ಕಂದಾಯ ಇಲಾಖೆ ನಚಿವರು ಇಬ್ಬರೂ ಇದ್ದಾರೆ. ನಾಳೆ ಅವರಿಗೆ ಸೂಚನೆ ಕೊಡುತ್ತೀರಾ ಎಂದು ಸದನದ ಮುಂದೆ ಹೇಳಬೇಕು.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು): ಅಲ್ಲಿರುವಂತಹ ಸಾವಿರಾರು ಕುಟುಂಬಗಳು ಏನಾಗಬೇಕು ಹೇಳಿ, ನಮ್ಮ ವ್ಯವಸ್ಥೆ ಮೇಲೆ ಅವರು ವಿಶ್ವಾಸ

ಕಳೆದುಕೊಂಡರೆ ಅವರನ್ನು ಸೇರಿಸಿಕೊಳ್ಳುವುದಕ್ಕೆ ಸಮಾಜಘಾತಕ ಶಕ್ತಿಗಳು ಕಾಯುತ್ತಿವೆ. ಅವರು ನಮ್ಮ ಮೇಲೆ ವಿಶ್ವಾಸ ಕಳೆದುಕೊಂಡು ಅವರ ಜೊತೆ ಕೈ ಜೋಡಿಸಿದರೆ ನಾವೆಲ್ಲರೂ ಅಸಹಾಯಕರಾಗುವ ಸ್ಥಿತಿ ಬರುತ್ತದೆ. ಅಧ್ಯಕ್ಷರೆ, ಇದರಲ್ಲಿ ಎರಡು ರೀತಿ ಗೋಜಲು ಇದೆ. ಇತ್ತೀಚಿನವರೆಗೆ ಪಹಣಿಯಲ್ಲಿ ಕಳಸೇಶ್ವರ ದೇವಸ್ಥಾನಕ್ಕೆ ಇನಾಮ್ ಭೂಮಿ ಎಂತಲೇ ಬರೆದಿತ್ತು. ಜಿಲ್ಲಾಧಿಕಾರಿಗಳು courtಗೆ ಕೊಟ್ಟಿರತಕ್ಕಂತಹದ್ದು.

ಅಧ್ಯಕ್ಷರು: ಇನಾಂ ಭೂಮಿ ಎಂದು ಇದ್ದರೆ Inam Abolition Act ಬಂದಾಗ ಅರ್ಜಿ ಹಾಕಿಕೊಂಡಿದ್ದರಾ?

ಶ್ರೀ ಸಿ.ಟಿ. ರವಿ: ಅರ್ಜಿ ಹಾಕಿ ಖಾತೆದಾರರಾಗಿ ಬ್ಯಾಂಕ್ ಸಾಲವನ್ನೂ ತೆಗೆದುಕೊಂಡಿದ್ದಾರೆ. ಅವರ ಹೆಸರಿನಲ್ಲಿಯೇ ಖಾತೆ ಇದೆ. ಅವರು ಹೊಸದಾಗಿ ಅರ್ಜಿ ಹಾಕಿ ಹಕ್ಕುಪತ್ರ ತೆಗೆದುಕೊಳ್ಳಬೇಕಾದುದು, ಸಾಗುವಳಿ ಚೀಟಿ ತೆಗೆದುಕೊಳ್ಳಬೇಕಾದುದು ಅಲ್ಲ ಇದು. ಇವರಿಗೆ ಹಕ್ಕುಪತ್ರ ಇದೆ, ಸಾಗುವಳಿ ಚೀಟಿ ಇದೆ, ಮನೆ ಕಟ್ಟಿಕೊಂಡು 100-150 ವರ್ಷಗಳಿಂದ enjoyment ನಲ್ಲಿದ್ದಾರೆ. Enjoymentನಲ್ಲಿದ್ದಾಗಲೂ ಕೂಡ ಈಗ 1928 ರಲ್ಲಿ Forest Gazette Notification ಆಗಿದೆ ಎಂದು 6777 ಎಕರೆ Gazette Notification ಆಗಿದೆ ಎಂದು ಎವಿಕ್ಷನ್ ಮಾಡುತ್ತಿದ್ದಾರೆ. Tenancy Act ನಲ್ಲಿ ಉಳುವವನೇ ಭೂಮಿಗೆ ಒಡೆಯ ಎಂದು ಕೊಟ್ಟರಿ, ಅದರಲ್ಲಿ ದೇವಸ್ಥಾನದ ಜಮೀನು ಕೊಟ್ಟರಿ, ಸರ್ಕಾರದ ಜಮೀನೂ ಕೊಟ್ಟರಿ, ಖಾಸಗಿ ಜಮೀನೂ ಕೊಟ್ಟರಿ. ಇವತ್ತು ಆ Tenancy Actನ ರಕ್ಷಣೆಯೂ ಮಾಡುತ್ತಿಲ್ಲ. ಇದರಲ್ಲಿ Unauthorized cultivation ಅಷ್ಟೇ ಅಲ್ಲ ಇಲ್ಲಿ ಇರುವುದು. ಅವರು ನಿಜವಾದ ಹಕ್ಕುದಾರರು. ಈಗ ಅರಣ್ಯ ಇಲಾಖೆ ಈ ಜಮೀನು ನಮ್ಮದೆಂದು ಹೇಳುತ್ತಿದ್ದಾರೆ. ಅರಣ್ಯ ಇಲಾಖೆಗೆ 1924 ರಲ್ಲಿ ಗಂಧದ ಮರಗಳನ್ನು ನಿರ್ವಹಣೆ ಮಾಡಿ ಅದರ ಹಣವನ್ನು ದೇವಸ್ಥಾನ ಕಟ್ಟುವುದಕ್ಕೋಸ್ಕರ ಕೊಡುತ್ತಿದ್ದರು. Forest Guard ಸಂಬಳ ಕೂಡ ದೇವಸ್ಥಾನದಿಂದ ಕೊಟ್ಟಿದ್ದಾರೆ. ಕಳಸೇಶ್ವರ ದೇವಸ್ಥಾನಕ್ಕೆ 14,000 ಕ್ಕೂ ಹೆಚ್ಚು ಎಕರೆ ಇನಾಮ್ ಕೊಟ್ಟಿದ್ದರು ಭೈರವ ಅರಸರು. ಅದು ಇನಾಮತಿ ಜಮೀನು. ಅರಣ್ಯ ಇಲಾಖೆಯ ಭೂಮಿ

ಅಲ್ಲ ಇದು. ಇದು ಒಂದು ಭಾಗ. ಇದಲ್ಲದೆ ಇದರ ಜೊತೆಗೆ ಇನ್ನೊಂದು ಇದೆ. ನಮ್ಮ ಇಡೀ ರಾಜ್ಯದಲ್ಲಿ 12 ಲಕ್ಷಕ್ಕೂ ಹೆಚ್ಚು ಜಮೀನು ಸರ್ಕಾರಿ ಜಮೀನು ಒತ್ತುವರಿ ಆಗಿದೆ ಎಂದು ಬಾಲಸುಬ್ರಮಣಿಯನ್ ಸಮಿತಿ ವರದಿ ಪ್ರಕಾರ ಹಿರೇಮಠ್‌ರವರು ಏನು ಕೋರ್ಟಿಗೆ ಹಾಕಿದ್ದಾರೆ, ಬಾಲಸುಬ್ರಮಣಿಯನ್ ಏನೂ ಸ್ಥಳ ತನಿಖೆ ಮಾಡಲಿಲ್ಲ.

ಅಧ್ಯಕ್ಷರು: ತಹಶೀಲ್ದಾರ್ ಆಫೀಸ್‌ನಲ್ಲಿ ಕೊಟ್ಟರು ತೆಗೆದುಕೊಂಡು ಬಂದರು.

ಶ್ರೀ ಸಿ.ಟಿ. ರವಿ: ಅವರು ಸರ್ವೇ ಮಾಡಲಿಲ್ಲ. ಅಂದಾಜಿನ ಮೇಲೆ 13,000 ಎಕರೆ ಒತ್ತುವರಿ ಆಗಿದೆ ಎಂದು ಕೊಟ್ಟರು. ಆ ವರದಿ ಆಧರಿಸಿ ಮಾನ್ಯ ಹಿರೇಮಠ್‌ರವರು PIL ಹಾಕಿದರು. ಆ PIL ಮೇಲೆ ಸರ್ಕಾರದಿಂದ ಒಂದು ಸುತ್ತೋಲೆ ಹೋಗಿದೆ. ಆ ಸರ್ಕಾರಿ ಸುತ್ತೋಲೆ ಪ್ರಕಾರ ಆ ಸುತ್ತೋಲೆ ಕಾಪಿ ನನ್ನ ಬಳಿ ಇದೆ ಹೇಳುತ್ತೇನೆ.

ಅಧ್ಯಕ್ಷರು: ಮಾನ್ಯ ರವಿ ಅವರೆ, ಟೈಮ್ ಆಯಿತು.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಬಹಳ ಗಂಭೀರವಾದ ವಿಷಯ ಇದೆ. ನಾಲ್ಕೈದು ದಿವಸಗಳಿಂದ ಇವತ್ತು ಇವತ್ತು ಎಂದು ಹೇಳುತ್ತಿದ್ದೀರಿ. ಆ ಸುತ್ತೋಲೆ ಪ್ರಕಾರ "Government for removing the encroachment from the Government and the forest lands". ಅಲ್ಲಿ ಹೇಳುತ್ತಾರೆ... 'development authorities and the petitioners towards preparing the realistic time-bound action plan for removal of the encroachment of Government lands'. Action plan ತಯಾರು ಮಾಡಿ ಎಂದು ಹೇಳಿದ್ದಾರೆ.

ಅಧ್ಯಕ್ಷರು: ಅದಕ್ಕೆ ಬಾಲಸುಬ್ರಮಣಿಯನ್ ಮತ್ತೆ ಕಮಿಟಿಗೆ ತರಬೇಕೆಂದು ನೀವು ಹೇಳುತ್ತಿರುವುದು.

ಶ್ರೀ ಸಿ.ಟಿ. ರವಿ: Commercial encroachment ಮಾಡಿದ್ದಾರಲ್ಲ ಅದನ್ನು ಬಿಡಿಸಲಿ. ರೈತರು ಬದುಕುವುದಕ್ಕೋಸ್ಕರ encroachment ಮಾಡಿರುವುದು.

ಅಧ್ಯಕ್ಷರು: ಈಗ ಮೊದಲು ಎವಿಕ್ಷನ್ ಮಾಡಿರುವುದನ್ನು ನಿಲ್ಲಿಸಬೇಕೆಂದು ಅಪೀಲ್ ಮಾಡಿ. ಆ ಮೇಲೆ ಡೀಟೇಲಾಗಿ ಮಾತನಾಡೋಣ.

ಶ್ರೀ ಸಿ.ಟಿ. ರವಿ: ಇದರಲ್ಲಿ ಎರಡು ಗೋಜಲಿದೆ. ಒಂದು ಕಳಸೇಶ್ವರ ಇನಾಮ್ ಭೂಮಿದು, ಅದರಲ್ಲಿರುವುದು forest ಮತ್ತು revenue ಸಮಸ್ಯೆ.

ಅಧ್ಯಕ್ಷರು: ಎಲ್ಲ ಡೀಟೇಲ್ ಆ ಮೇಲೆ ಕುಳಿತುಕೊಂಡು ಮಾತನಾಡಿ.

ಶ್ರೀ ಸಿ.ಟಿ. ರವಿ: ನಾಳೆ ನಾವು ಯಾರೂ ಊರಿಗೆ ಹೋಗುವುದಕ್ಕಾಗುವುದಿಲ್ಲ. ನಮ್ಮ ಹಕ್ಕು ರಕ್ಷಣೆ ಮಾಡುವುದಕ್ಕೆ ಆಗದೇ ಇದ್ದರೆ ನೀವ್ಯಾಕೆ ಆ ಜಾಗದಲ್ಲಿರಬೇಕೆಂದು ಕೇಳುತ್ತಾರೆ. ನಾವೇಕೆ ಇಲ್ಲಿಗೆ ಬರಬೇಕು ಹೇಳಿ. ನಮ್ಮ ಜನರನ್ನು ನಾವು ರಕ್ಷಣೆ ಮಾಡುವುದಕ್ಕೆ ಆಗದೇ ಇದ್ದ ಮೇಲೆ ನ್ಯಾಯವಾಗಿರುವವರನ್ನು ರಕ್ಷಣೆ ಮಾಡುವುದಕ್ಕೆ ಆಗದೇ ಇದ್ದ ಮೇಲೆ ನಾವೇತಕ್ಕೆ ಇಲ್ಲಿ ಇರಬೇಕು ಹೇಳಿ. ಅವರೆಲ್ಲರೂ ಹೋಗಿ ಬಂದೂಕು ಹಿಡಿದು ಬುದ್ದಿ ಕಲಿಸಬೇಕೆಂದು ಹೇಳುವವರ ಕೈ ಸೇರಿಕೊಂಡರೆ ಈ ವ್ಯವಸ್ಥೆ ಉಳಿಯುವುದಿಲ್ಲ. ಈ ತಕ್ಷಣಕ್ಕೆ ಕಳಸೇಶ್ವರ ಒತ್ತುವರಿ ತೆರವು ನಿಲ್ಲಿಸಬೇಕು.

ಅಧ್ಯಕ್ಷರು: ನಿನ್ನೆ ನಮ್ಮ ಸ್ನೇಹಿತರು ಬಹಳ ಚೆನ್ನಾಗಿ ಹೇಳುತ್ತಿದ್ದರು. ಬಜೆಟ್ ಮಾಡಬೇಕಾದರೆ ಜನರನ್ನು ಕೇಳಿಕೊಂಡು ಬರಬೇಕು.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಒಂದೇ ಸಾರಿ ಪ್ರಳಯ ಬೆಂಕಿ ಒಟ್ಟೊಟ್ಟಿಗೆ ಬಂದರೆ ನಾವೇನು ಮಾಡುವುದು? ಒಂದು ಕಡೆ ಕಳಸೇಶ್ವರ ಇನಾಮ್ ಭೂಮಿ ಏನು ತೆರವು ಮಾಡುತ್ತಿದ್ದಾರೆ, ಅದು ಒತ್ತುವರಿ ಅಲ್ಲ. ಅದು ಅವರು ಅಧಿಕೃತವಾಗಿ ಇರುವುದಕ್ಕೆ ಇರುವ ಹಕ್ಕು, ಅವರನ್ನು ತೆರವುಗೊಳಿಸುವುದನ್ನು ನಿಲ್ಲಿಸಬೇಕು. ಅವರು tenant ಅಲ್ಲ, ಅವರ ಹತ್ತಿರ ಸಾಗುವಳಿ ಹಕ್ಕು ಪತ್ರ ಹಾಗೂ ಖಾತೆ ಇದೆ. ಬ್ಯಾಂಕ್ ಸಾಲ ಇದೆ, ಎಲ್ಲಾ ಇದೆ. ಮೆಷಿನ್ ಹಿಡಿದುಕೊಂಡು ಗಿಡ ಕಡಿಯುತ್ತಿದ್ದಾರೆ. ಈಗಾಗಲೇ 93 ಎಕರೆ ಪ್ರದೇಶದಲ್ಲಿ ಮಾನವೀಯತೆ ಇಲ್ಲದೇ ಗಿಡಗಳನ್ನು ಕಡಿದು ಹಾಕಿದ್ದಾರೆ. ಅದನ್ನು ನೋಡಿದರೆ, ಇವರ್ಯಾರೂ forest ಉಳಿಸುವವರು ಎಂದು

ಹೇಳುವುದಕ್ಕಾಗುವುದಿಲ್ಲ. ಆ ರೀತಿ ಅವರು ಗಿಡಗಳನ್ನು ಕಡಿದು ಹಾಕಿದ್ದಾರೆ. ಇದು ಒಂದು ಭಾಗ. ಇನ್ನೊಂದು action plan ಮಾಡಿ ಅವರನ್ನು ತೆರವುಗೊಳಿಸುತ್ತೇವೆಂದು ಕೋರ್ಟಿಗೆ ಅಫಿಡವಿಟ್ ಕೊಡುವುದಕ್ಕೆ ಹೊರಟಿದ್ದಾರೆ. ನಾಳೆ ನಮ್ಮ ಕುತ್ತಿಗೆಗೆ ಬರುತ್ತದೆ. ನೀವು 12 ಲಕ್ಷ ಎಕರೆ ತೆರವುಗೊಳಿಸುತ್ತೀರೆಂದರೆ ಎಷ್ಟು ಸಾವಿರ, ಎಷ್ಟು ಲಕ್ಷ ಜನ ರೈತರಿಗೆ ತೊಂದರೆಯಾಗುತ್ತದೆ. ಎಷ್ಟು ಕುಟುಂಬಗಳು ಬೀದಿಗೆ ಬೀಳುತ್ತವೆ? ಅದರಿಂದಾಗತಕ್ಕಂತಹ ಸಮಸ್ಯೆಗಳ ಬಗ್ಗೆ ಯೋಚನೆ ಮಾಡಿದ್ದಾರಾ? ಕೋರ್ಟಿಗೆ ಅಫಿಡವಿಟ್ ಹಾಕಿ ಕುತ್ತಿಗೆಗೆ ಹಗ್ಗ ಹಾಕಿಕೊಳ್ಳುವುದು ಬೇಡ.

ಅಧ್ಯಕ್ಷರು: ನೀವೇ ಮಂತ್ರಿಯಾಗಿದ್ದಿರಲ್ಲ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ನಾನು ಮಂತ್ರಿಯಾಗಿದ್ದುದು ಪ್ರಶ್ನೆ ಅಲ್ಲ. ಅವತ್ತು action plan ಮಾಡುವುದಕ್ಕೆ ಸರ್ಕಾರ ಸುತ್ತೋಲೆ ಕಳುಹಿಸಿರಲಿಲ್ಲ. ಅವತ್ತು ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಈ ಹಿಂದೆ ಅಧಿಕಾರಿಗಳು ಎವಿಕ್ಷನ್ ಮಾಡಬೇಕೆಂದು ಬಂದರು ನಾವೆಲ್ಲಾ ಬಂದು ಕುಳಿತುಕೊಂಡೆವು. ನಾನಿದ್ದೇನೆ ಯಾವ ಕಾರಣಕ್ಕೂ ತೆರವು ಮಾಡಬೇಡಿ ಎಂದು ಹೇಳಿದರು. ಬೇಕಾದರೆ proceedings ಮಾಡಲಿ ಎಂದು ಹೇಳಿದರು. ಅಧ್ಯಕ್ಷರೆ, ದಯಮಾಡಿ ಎರಡು ಕೆಲಸ ಮಾಡಬೇಕು. ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ತಕ್ಷಣ ಕಳಸೇಶ್ವರ ಇನಾಮ್ ಭೂಮಿಯಲ್ಲಿ ಯಾರು ಖಾತೆದಾರರಿದ್ದಾರೆ, ಸಾಗುವಳಿದಾರರಿದ್ದಾರೆ ಅವರನ್ನು ತೆರವುಗೊಳಿಸುವುದನ್ನು ತಕ್ಷಣ ನಿಲ್ಲಿಸಬೇಕು. ಇನ್ನೊಂದು action plan ಮಾಡಿ ಇಂತಿಂಥ date ಗೆ ಇಷ್ಟಿಷ್ಟು ಎಕರೆ ತೆರವುಗೊಳಿಸುತ್ತೇವೆಂದು ಹೇಳಿ ಹೈಕೋರ್ಟಿಗೆ ಅಫಿಡವಿಟ್ ಕೊಟ್ಟು ಕುತ್ತಿಗೆಗೆ ಹಗ್ಗ ಹಾಕಿಕೊಳ್ಳುವ ಕೆಲಸ ಮಾಡುವುದು ಬೇಡ. ರೈತರ ಕುತ್ತಿಗೆಗೆ ನೇಣು ಹಾಕುವ ಕೆಲಸ ಮಾಡುವುದು ಬೇಡ. ಅದನ್ನು ತಕ್ಷಣ ನಿಲ್ಲಿಸಲಿ. ಉಳಿದವರದ್ದು ನಾಳೆ ಬೆಳಿಗ್ಗೆ ಎವಿಕ್ಷನ್ ಮಾಡದೇ ಇರಬಹುದು, ಆದರೆ ನಾಳೆ ಕೋರ್ಟ್ ಆರ್ಡರ್ ಬಂದಿದೆ ಏನು ಮಾಡುವುದು ಎಂದು ಹೇಳುತ್ತಾರೆ. ಇವರೇ ಅಫಿಡವಿಟ್ ಕೊಡುವುದು, ಇವರೇ ಅಫಿಡವಿಟ್ ಕೊಟ್ಟು ಒಪ್ಪಿಕೊಂಡು

ಕೋರ್ಟ್ ಆರ್ಡರ್ ಬಂದಿದೆ ಎಂದು ಹೇಳುವುದು. ಬೆಂಗಳೂರು ಸುತ್ತಮುತ್ತ ಇರುವಂತಹ ಕಮರ್ಷಿಯಲ್ ಲ್ಯಾಂಡ್‌ಗಳನ್ನು ಒತ್ತುವರಿ ಮಾಡಿದ್ದಾರಲ್ಲಾ ಅವುಗಳನ್ನು ತೆರವುಗೊಳಿಸಲಿ. ಒಂದೊಂದು ಎಕರೆ ಬೆಲೆ 8, 10, 20 ಕೋಟಿ ರೂ. ಆಗುತ್ತದೆ. ನಮ್ಮದು ಹಾಗಲ್ಲ. ನಾವು ಬದುಕಿಗಾಗಿ ಮಾಡುವುದು. ದಯಮ್ಮಾಡಿ ಇದನ್ನು ನಿಲ್ಲಿಸುವಂತಹ ಕೆಲಸ ಮಾಡಲಿ. ಇಲ್ಲದೇ ಇದ್ದರೆ ನಮಗೆ ಯಾರಿಗೂ ಉಳಿಗಾಲವಿಲ್ಲ. ಈಗ ಬೂದಿ ಮುಚ್ಚಿದ ಕೆಂಡದ ಹಾಗಿದೆ, ಯಾವಾಗ ಬೇಕಾದರೂ ಸ್ಫೋಟ ಆಗಬಹುದು. ಇದು ಬರೀ ಚಿಕ್ಕಮಗಳೂರಿನ ಸಮಸ್ಯೆ ಅಲ್ಲ. ಇಡೀ ರಾಜ್ಯದ ಸಮಸ್ಯೆ.

ಅಧ್ಯಕ್ಷರು: ಎಲ್ಲಾ ಕಡೆ ಇದೆ. ನಮ್ಮ ಊರಿನಲ್ಲಿಯೂ ಇದೆ. ನಾನು ನೋಡಿದ್ದೇನೆ. ಕಾನೂನು ಮಂತ್ರಿ ಏನು ಮಾಡುತ್ತಾರೆ? ಬಾಲಸುಬ್ರಮಣಿಯನ್ ರವರ ರಿಪೋರ್ಟ್ ಇಟ್ಟುಕೊಳ್ಳುತ್ತಾರೆ ಕೊಡುತ್ತಾರೆ. ಎವಿಕ್ಷನ್‌ಗೆ ಇಡೀ ತಾಲ್ಲೂಕಿಗೆ ಒಂದು ಟಾರ್ಗೆಟ್ ಮಾಡಿದ್ದಾರೆ ಗೊತ್ತಾ ನಿಮಗೆ? ಇವರೇ ಇದ್ದಾಗ 192 ಪಾಸ್ ಮಾಡಿದ್ದರು. ಇವರೇ ಇದ್ದಾಗ Land Revenue Act ಗೆ amend ಮಾಡಿ pass ಮಾಡಿದ್ದು, ನಿಮಗೆ ಗೊತ್ತೆ? ಅಮೆಂಡ್ ಮಾಡಿದ್ದು ಹೌದು ತಾನೆ? ಈಗ ಅದೇ ಬಂದಿರುವುದು.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, 1,49,604 ಎಕರೆ ಶಿವಮೊಗ್ಗದಲ್ಲಿ ಒತ್ತುವರಿಯಾಗಿದೆಯೆಂದು ಇವರು ರಿಪೋರ್ಟ್ ಮಾಡಿದ್ದಾರೆ. ಅದರಲ್ಲಿ ತಕ್ಷಣ ತೆರವುಗೊಳಿಸುವುದಕ್ಕೆ 59,745 ಎಕರೆ ಇದೆ.

ಅಧ್ಯಕ್ಷರು: ರವಿಯವರೆ, ನಾನು ಹೇಳುತ್ತೇನೆ ಕೇಳಿ. ನೀವು ಮೊದಲು ಇನಾಮ್‌ದೊಂದನ್ನು ಬಗೆಹರಿಸಿಕೊಳ್ಳಿ.

ಶ್ರೀ ಸಿ.ಟಿ. ರವಿ: ಎರಡೂ ಒಟ್ಟೊಟ್ಟಿಗೆ ಬಂದಿದೆಯಲ್ಲ?

ಅಧ್ಯಕ್ಷರು: ಅದಕ್ಕೆ ಸಂಬಂಧಪಟ್ಟಂತೆ ಬೇರೆ ಚರ್ಚೆ ಮಾಡಿ. ಏಕೆಂದರೆ ಈಗ ಪ್ರತಿ ತಾಲ್ಲೂಕಿಗೆ ಒಂದು ಟಾರ್ಗೆಟ್ ಕೊಟ್ಟಿದ್ದಾರೆ. ಡಿ.ಸಿ. ಯವರೇ ಕೊಟ್ಟಿದ್ದಾರೆ ನೋಡಿ.

ಶ್ರೀ ಸಿ.ಟಿ. ರವಿ: ಟಾರ್ಗೆಟ್ ಕೊಟ್ಟು circular ಕಳುಹಿಸಿದ್ದಾರೆ.

ಅಧ್ಯಕ್ಷರು: ನನಗೂ ಗೊತ್ತಿದೆ. Unfortunately, ಆ ವಿಚಾರವನ್ನು ಈ ಸದನದಲ್ಲಿ ಕೊನೆಯ ದಿವಸ ಪ್ರಸ್ತಾಪ ಮಾಡುತ್ತಿದ್ದೀರಿ. ನೀವು ಮುಂಚೆ ಮಾಡಬೇಕಾಗಿತ್ತು. ಅದನ್ನು ಬಿಟ್ಟು ಕೊನೆಯ ದಿವಸ ಕೊನೆಯ ಗಳಿಗೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದೀರಿ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಕಳೆದ ನಾಲ್ಕು ದಿವಸಗಳಿಂದಲೂ ಪ್ರತಿ ದಿನ ಬೆಳಿಗ್ಗೆ ಈ ಬಗ್ಗೆ ಚರ್ಚೆಗೆ ಅವಕಾಶ ಕೇಳುತ್ತಿದ್ದೇನೆ. ನೀವು ಇವತ್ತು ಕೊಡುತ್ತೇನೆ, ನಾಳೆ ಕೊಡುತ್ತೇನೆ ಎಂದು ನೀವೇ ಹೇಳಿದ್ದು.

ಅಧ್ಯಕ್ಷರು: ನೀವು ಹೇಳುತ್ತಿದ್ದದ್ದು ಒತ್ತುವರಿಯದ್ದನ್ನು.

ಶ್ರೀ ಸಿ.ಟಿ. ರವಿ: ಇಲ್ಲ, ಇಲ್ಲ, ನಾನು ಎರಡನ್ನೂ ಹೇಳುತ್ತಿದ್ದೆ.

ಅಧ್ಯಕ್ಷರು: ಆಯಿತು. ಈಗ ಬೇಗ ಹೇಳಿ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಆ ಪ್ರಕಾರ 4,54,704 ಎಕರೆ ಇದೆ.

ಅಧ್ಯಕ್ಷರು: ನೋಡ್ರಿ. ಈಗ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕಾದರೆ ನಮ್ಮ ಪಕ್ಕದಲ್ಲಿಯೇ ಇರತಕ್ಕಂಥ ಕಾನೂನು ಸಚಿವರು ಮತ್ತು ಕಂದಾಯ ಸಚಿವರು ಹೇಳಬೇಕು.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಈಗ ಹೊರಡಿಸಿರುವ ಸುತ್ತೋಲೆಯನ್ನು ಇವರು ವಾಪಸ್ಸು ಪಡೆದುಕೊಳ್ಳಲಿ.

ಅಧ್ಯಕ್ಷರು: ಮಂತ್ರಿಗಳೆ, ವಾಪಸ್ ಪಡೆಯುತ್ತೀರೇನ್ರಿ?

ಶ್ರೀ ಸಿ.ಟಿ. ರವಿ: ಅಫಿಡೆವಿಟ್ ಕೊಡುವುದು ಬೇಡ. ಚರ್ಚೆ ಮಾಡಲಿ. ಅಗತ್ಯ ಬಿದ್ದರೆ ಕಾನೂನಿಗೆ ತಿದ್ದುಪಡಿಯನ್ನು ತರಲಿ. ಏಕೆಂದರೆ ಕಾನೂನು ಮಾಡುವುದು ಈ ಸದನ ತಾನೇ? ಯಾವು ಯಾವುದೋ ಒಂದೊಂದು, ಎರಡೆರಡು ಇಶ್ಯೂ ಇಟ್ಟುಕೊಂಡು ಪಾರ್ಲಿಮೆಂಟಿನಲ್ಲಿಯೇ ಕಾನೂನಿಗೆ ತಿದ್ದುಪಡಿಯನ್ನು ಮಾಡುತ್ತೇವೆ. ಇಲ್ಲಿ ಅದೇ ರೀತಿಯಲ್ಲಿ ಲಕ್ಷಾಂತರ ರೈತರ ಪರವಾಗಿ ಕಾನೂನಿಗೆ ತಿದ್ದುಪಡಿಯನ್ನು ತರುವುದಕ್ಕೆ ಆಗುವುದಿಲ್ಲವೇನು.?

ಅಧ್ಯಕ್ಷರು: ನೀವು ಹೇಳುವುದು ನಿಜವಿದೆ. ಮಾನ್ಯ ಸಚಿವರೆ, ಹೇಳ್ರಿ.

ಶ್ರೀ ಸಿ.ಟಿ. ರವಿ: ದಯಮಾಡಿ ಎರಡೂ ವಿಚಾರಗಳಲ್ಲಿಯೂ ಅಷ್ಟೆ. ಕಳಸೇಶ್ವರ ಜಮೀನನ್ನು ತೆರವು ಮಾಡುವುದನ್ನು ನಿಲ್ಲಿಸಲಿ. ಈಗ ಸುತ್ತೋಲೆ ಕೊಟ್ಟಿರುವುದನ್ನು ವಾಪಸ್ ತೆಗೆದುಕೊಳ್ಳಲಿ. ಒಂದು ವೇಳೆ ಅಫಿಡೆವಿಟ್ ಕೊಟ್ಟರೆ ನಾವೆಲ್ಲರೂ ಸತ್ತಂತೆ.

ಅಧ್ಯಕ್ಷರು: ಹೌದು ನಿಜ. ಅದರಲ್ಲೇನೂ ಅನುಮಾನವಿಲ್ಲ ಬಿಡಿ.

ಶ್ರೀ ಕೆ.ಜಿ. ಬೋಪಯ್ಯ: ಒತ್ತುವರಿ ಎಲ್ಲಾ ಕಡೆಯೂ ಇದೆ.

ಅಧ್ಯಕ್ಷರು: ಕೆಲವರು ಏನು ತಿಳಿದುಕೊಂಡಿದ್ದಾರೆ ಬೋಪಯ್ಯನವರೆ, ಇವೆಲ್ಲಾ ಚಿಕ್ಕಮಗಳೂರಿಗೆ ಬಂದಿದೆ, ಇಲ್ಲೇನೂ ಬಂದಿಲ್ಲವೆಂದು ಕೆಲವರು ತಿಳಿದುಕೊಂಡಿದ್ದಾರೆ. ಊರು ಊರಿನಲ್ಲೆಲ್ಲಾ ಇದು ಇದೆ. ಹೊಳೆನರಸೀಪುರದಲ್ಲಿ ಇಲ್ಲವೆ, ಇದೆ. ನಿಮ್ಮ ಊರಿನಲ್ಲಿ ಇಲ್ಲವೇನ್ರಿ?

ಶ್ರೀ ಡಿ.ಕೆ. ಶಿವಕುಮಾರ್: ನಾವು ಇದರ ಬಗ್ಗೆ ಸ್ಟ್ರೈಕ್ ಮಾಡಿ ಮಾಡಲಾಗಿದೆ. ಈಗ ಅದನ್ನೆಲ್ಲವನ್ನೂ ಹೇಳುವುದು ಬೇಡ ಬಿಡಿ.

ಶ್ರೀ ಬಿ.ಬಿ. ನಿಂಗಯ್ಯ (ಮೂಡಿಗೆರೆ): ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ನಾಯಕರಾದ ಕುಮಾರಸ್ವಾಮಿಯವರು ಮಾತನಾಡಿದ ವಿಚಾರಕ್ಕೆ ಸಂಬಂಧಪಟ್ಟಂತೆ ಅವರು ಹೇಳದಿರುವ ಕೆಲವೊಂದು ಅಂಶಗಳನ್ನು ಹೇಳುತ್ತೇನೆ. ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ಶ್ರೀ ಕಳಸೇಶ್ವರ ಸ್ವಾಮಿ ದೇವಸ್ಥಾನದ ಜಮೀನಿನ ಬಗ್ಗೆ ನಮ್ಮ ನಾಯಕರಾದ ಕುಮಾರಸ್ವಾಮಿಯವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಅದನ್ನು ಮುಂದುವರೆಸಿ ಶ್ರೀಮಾನ್ ರವಿಯವರೂ ಕೂಡ ಮಾತನಾಡಿದ್ದಾರೆ. ದಿನಾಂಕ: 20-04-2012 ರಲ್ಲಿ ಹೈಕೋರ್ಟ್ ಕೊಟ್ಟಂತಹ ತೀರ್ಪಿನ ಮೇರೆಗೆ, ಸರ್ಕಾರಕ್ಕೆ ಹೈಕೋರ್ಟ್ ಆದೇಶವನ್ನು ಮಾಡಿದ್ದಾರೆ. ಅಲ್ಲೇನು ರೈತರುಗಳು ಕೃಷಿ ಕಾರ್ಯ ಮಾಡಿಕೊಂಡಿದ್ದಾರೆ ಅದನ್ನು ತೆರವುಗೊಳಿಸಿ ಅನುಪಾಲನಾ ವರದಿಯನ್ನು ನಮಗೆ ಸಲ್ಲಿಸಿ ಎಂದು ಸರ್ಕಾರಕ್ಕೆ ಹೈಕೋರ್ಟ್ ಆದೇಶವನ್ನು ಕೊಟ್ಟಿದೆ. ಆದರೆ ಕಳಸೇಶ್ವರ ದೇವಸ್ಥಾನದ ಜಮೀನಿಗೆ 600 ವರ್ಷಗಳ ಇತಿಹಾಸವಿದೆ.

ಕಾರ್ಕಳದ ಬೈರವ ಅರಸು ಅನ್ನತಕ್ಕಂಥವರು 600 ವರ್ಷಗಳ ಹಿಂದೆ ಕಳಸೇಶ್ವರ ದೇವಸ್ಥಾನಕ್ಕೆ 14340 ಎಕರೆ 09 ಗುಂಟೆ ಜಮೀನನ್ನು ದಾನ ಕೊಟ್ಟಿದ್ದಾರೆ. ಅದರಡಿಯಲ್ಲಿ ಸುಮಾರು ವರ್ಷಗಳ ಕಾಲ ಕೃಷಿ ಕಾರ್ಯ ಮಾಡಿಕೊಂಡು ಬಂದಿದ್ದಾರೆ. ಈಗ ಕೃಷಿ ಮಾಡಿಕೊಂಡಂಥವರನ್ನು ಒಕ್ಕಲೆಬ್ಬಿಸಿ ತಕ್ಷಣ ಅನುಪಾಲನಾ ವರದಿಯನ್ನು ಕೋರ್ಟಿಗೆ ಕೊಡಿ ಎನ್ನತಕ್ಕಂಥದ್ದನ್ನು ಹೇಳಿದ್ದಾರೆ. ಈಗಾಗಲೇ ರೈತರ ತೋಟವನ್ನು ಕಡಿಯುವುದಕ್ಕೆ ಶುರು ಮಾಡಿದ್ದಾರೆ. ನಾಲ್ಕು ರೈತರ ಕಾಫಿ ತೋಟ, ಅಡಿಕೆ ತೋಟವನ್ನು ಕಡಿದು 93 ಎಕರೆ eviction ಮಾಡಲಾಗಿದೆ. ಅಸೆಂಬ್ಲಿ ಮುಗಿಯಲೆಂದು ಇವತ್ತಿನವರೆಗೆ ಸುಮ್ಮನಿದ್ದಾರೆ. ಇವತ್ತು Conservator of Forests, DCF ಗಳೆಲ್ಲರೂ ಅಲ್ಲಿ ಹೋಗಿ ಕುಳಿತಿದ್ದಾರೆ. ನಾಳೆ ಬೆಳಿಗ್ಗೆಯೇ ಮತ್ತೆ eviction ಕಾರ್ಯ ಶುರು ಮಾಡುತ್ತಾರೆ. ಆ ಕಾರಣಕ್ಕಾಗಿ ಜರೂರಾಗಿ ಅವರು ಈ ಕೆಲಸವನ್ನು ಮುಂದುವರೆಸಬಾರದೆಂದು ಸರ್ಕಾರ ಆದೇಶವನ್ನು ಈಗಲೇ ಮಾಡಬೇಕು. ಇದು ಒಂದು ವಿಚಾರ. ಎರಡನೆಯದಾಗಿ, ಈಗಾಗಲೇ ಸನ್ಮಾನ್ಯ ಕುಮಾರಸ್ವಾಮಿಯವರು ಹೇಳಿದ ಹಾಗೆ ಕುದುರೆಮುಖ ಕಂಪನಿಗೆ ಕಂದಾಯ ಇಲಾಖೆಯಿಂದ 2742 ಎಕರೆ ಜಮೀನನ್ನು ಲೀಸ್ ಮೇಲೆ ಕೊಡಲಾಗಿತ್ತು. ಈಗ ಕಂಪನಿ ಮುಚ್ಚಿಹೋಯಿತು. ಆಗ ನೀವಿದ್ದ ಕಾಲದಲ್ಲಿಯೇ ಮಾನ್ಯ ಎಸ್.ಎಂ. ಕೃಷ್ಣ ಸಾಹೇಬರು ಸುಪ್ರೀಂ ಕೋರ್ಟಿನ ಆದೇಶದ ಮೇರೆಗೆ ಆ ಕುದುರೆಮುಖ ಕಂಪನಿಯನ್ನು ಮುಚ್ಚಿದ್ದರು. ಇದರಿಂದಾಗಿ 2742 ಎಕರೆ ಜಮೀನು ಪುನ: ಕಂದಾಯ ಇಲಾಖೆಗೆ ವಾಪಸ್ ಬಂದಿದೆ. ಏನು ಈ ಇನಾಮ್ ಭೂಮಿಯಿದೆ, ಅದರ ಪಕ್ಕದಲ್ಲಿಯೇ ಈ 2742 ಎಕರೆ ಭೂಮಿ ಇದೆ. ಇಲ್ಲಿ ಇವರು ಒತ್ತುವರಿಯಾಗಿದೆಯೆಂದು ಹೇಳಿರತಕ್ಕಂಥ ಜಮೀನು ಒಟ್ಟು 1800 ಎಕರೆ. ಮೊನ್ನೆ ಡಿ.ಸಿ.ಯವರು ಹೊಸ ಪ್ರಪೋಸಲ್ ಒಂದನ್ನು ಕೊಟ್ಟಿದ್ದಾರೆ. ಆ ಭೂಮಿಯನ್ನು ಫಾರೆಸ್ಟ್ ಇಲಾಖೆಗೆ ಕೊಟ್ಟು, ಯಾರು ಪಾಪ ಬಡ ರೈತರಿದ್ದಾರೆ ಅವರನ್ನು ಒಕ್ಕಲೆಬ್ಬಿಸುವುದನ್ನು ಮಾಡುವುದು ಬೇಡ ಎನ್ನತಕ್ಕಂಥ ಸಲಹೆಯನ್ನು ಜಿಲ್ಲಾಡಳಿತಕ್ಕೆ ಕೊಟ್ಟಿದ್ದಾರೆ. ಆ ಪ್ರಪೋಸಲ್ ಒಂದನ್ನು ಸರ್ಕಾರಕ್ಕೂ ಕೂಡ ಕೊಟ್ಟಿದ್ದಾರೆ. ಈಗ ಸರ್ಕಾರ ಕೋರ್ಟಿಗೆ ಒಂದು ಅಫಿಡವಿಟ್‌ನ್ನು ಕೊಟ್ಟು ಬದಲಿ ಭೂಮಿ ಇರುವುದನ್ನು, ಅಂದರೆ

ಪಕ್ಕದಲ್ಲಿಯೇ ಇದೆ, ನೀವು ಕೊಟ್ಟ ಪಕ್ಕದಲ್ಲಿಯೇ ಇದೆ. ಆ ಭೂಮಿಯನ್ನು ತೆಗೆದುಕೊಂಡು ಅರಣ್ಯ ಇಲಾಖೆ, ಅದೃಷ್ಟವಶಾತ್ ಇವತ್ತು ಕೇಂದ್ರ ಸಚಿವರು ನಮ್ಮ ರಾಜ್ಯದವರೇ ಇದ್ದಾರೆ, ಈ ಎಲ್ಲಾ ಸಮಸ್ಯೆಗಳನ್ನು ಅಂದರೆ ಈ ಮೂರೂ ಸಮಸ್ಯೆಗಳಿಗೆ ಸಂಬಂಧಿಸಿದ ಸಚಿವರುಗಳು ಅಂದರೆ, ಕಂದಾಯ ಸಚಿವರು, ಅರಣ್ಯ ಸಚಿವರು ಮತ್ತು ಕಾನೂನು ಸಚಿವರುಗಳು ಪರಿಹರಿಸಲು ಇಲ್ಲಿಯೇ ಇದ್ದಾರೆ. ಈ ಹಿಂದೆ ಜುಲೈನಲ್ಲಿಯೂ ಕೂಡ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಮಾನ್ಯ ಅಧ್ಯಕ್ಷರೆ, ತಾವು ಆಗ ಆ ಮೂರು ಸಚಿವರಿಗೆ ಹೇಳಿ ಕಮಿಟಿ ರಚನೆ ಮಾಡಿ ಎಂದು ತಾವು ಆದೇಶವನ್ನು ಕೊಟ್ಟಿದ್ದಿರಿ. ಆದರೂ ಏನೂ ಮಾಡಲಿಲ್ಲ. ತದನಂತರ ಬೆಳಗಾಂ ಅಧಿವೇಶನದಲ್ಲಿಯೂ ಕೂಡ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಇವತ್ತಿನವರೆವಿಗೂ ಏನು ಮಾಡದಿದ್ದರಿಂದ ಈಗ eviction start ಆಗಿದೆ. ಅದಕ್ಕಾಗಿ ನಾನು ನಿಮ್ಮಲ್ಲಿ ವಿನಂತಿ ಮಾಡುತ್ತೇನೆ. ಇದು ಬಡ ರೈತರ ಬದುಕಿನ ಪ್ರಶ್ನೆಯಾಗಿದೆ. ಇವತ್ತು ಮಹಾತ್ಮ ಗಾಂಧಿಯವರ ಪುಣ್ಯತಿಥಿ.

ಅಧ್ಯಕ್ಷರು: ಆಂಜನೇಯರವರೆ, ಕಮಿಟಿಯನ್ನು ನೀವು ಮಾಡಬೇಕು. ಇನ್ನೂ ಕಮಿಟಿ ಮಾಡಿಲ್ಲವೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ನೋಡಿ.

ಶ್ರೀ ಬಿ.ಬಿ. ನಿಂಗಯ್ಯ: ಮಾನ್ಯ ಅಧ್ಯಕ್ಷರೆ, ಇವತ್ತು ಗಾಂಧೀಜಿಯವರ ಪುಣ್ಯತಿಥಿ. ಅವರು ಏನು ಹೇಳಿದ್ದಾರೆಂದರೆ, 'ಭಾರತದ ಗ್ರಾಮ ವಾಸಿಗಳ ಜೀವನ ಹಸನಾಗಬೇಕು. ಅನ್ನದಾತರಾದ ಅವರಲ್ಲಿ ದೇಶಭಕ್ತಿ ಪ್ರದರ್ಶಿಸಬೇಕು. ಗ್ರಾಮಗಳಲ್ಲಿ ಸಮೃದ್ಧಿ ಬೆಳೆ ಬೆಳೆದು ನಾಡಿಗೆ ಹಂಚಬೇಕು. ಸಂತುಷ್ಟ ರೈತರಿಂದ ಭಾರತ ರಾಮರಾಜ್ಯವಾಗಬೇಕು.' ಎಂದು ಹೇಳಿದ್ದಾರೆ.

ಅಧ್ಯಕ್ಷರು: ಯಾರು ಆ ರೀತಿ ಹೇಳಿರುವುದು?

ಶ್ರೀ ಬಿ.ಬಿ. ನಿಂಗಯ್ಯ: ಮಹಾತ್ಮ ಗಾಂಧೀಜಿ ಹೇಳಿರತಕ್ಕಂಥದ್ದನ್ನು ಇವತ್ತು ಪತ್ರಿಕೆಯಲ್ಲಿ ಮುದ್ರಿಸಿದ್ದಾರೆ.

ಅಧ್ಯಕ್ಷರು: ಅವರು ಮುದ್ರಿಸಿದ್ದಾರೆಂದರೆ ನೀವು ಓದಿಕೊಳ್ಳಿ.

ಶ್ರೀ ಬಿ.ಬಿ. ನಿಂಗಯ್ಯ: ಅದಕ್ಕೋಸ್ಕರವೇ ನಾನು ಹೇಳುತ್ತಿರುವುದು. ಇವತ್ತು ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು ರೈತರ ಬಗ್ಗೆ ಮಾತನಾಡುತ್ತಾ ನಾವು ರೈತರನ್ನು ರಕ್ಷಣೆ ಮಾಡುತ್ತೇವೆ. ನಮ್ಮ ಸರ್ಕಾರ ರೈತರ ಪರವಾದ ಸರ್ಕಾರವೆಂದು ಹೇಳಿದರು. ಆದರೆ ಅಲ್ಲಿ ಒಕ್ಕಲೆಬ್ಬಿಸತಕ್ಕಂಥ ಕೆಲಸ ವಾಗುತ್ತಿದೆ. ತಮಗೆ ಗೊತ್ತಿದೆ, ಕಾಫಿ ತೋಟವನ್ನು ನೂರಾರು ವರ್ಷಗಳಿಂದ ಮಾಡಿಕೊಂಡು ಬಂದಿದ್ದಾರೆ. ಈಗ ಅವರನ್ನು ಬೀದಿಗೆ ಎಳೆಯುವ ಮೂಲಕ ಅವರ ಬದುಕನ್ನೇ ನಾಶ ಮಾಡುತ್ತಿದ್ದಾರೆ. ಆದುದರಿಂದ ಇವರ ಬಗ್ಗೆ ಸರ್ಕಾರಕ್ಕೆ ಕಾಳಜಿಯಿದ್ದರೆ ತಕ್ಷಣ ಅದನ್ನು ನಿಲ್ಲಿಸಬೇಕು. ಇವತ್ತು ಕುದುರೆಮುಖ ಕಾರ್ಖಾನೆಗೆ ಕೊಟ್ಟಿದ್ದ ಜಮೀನುಗಳು ಏನು ಮತ್ತೆ ಕಂದಾಯ ಇಲಾಖೆಗೆ ಬಂದಿದೆಯೋ, ಬದಲಿ ಭೂಮಿಯನ್ನು ಕೊಟ್ಟು ಆ ಬಗ್ಗೆ ಕ್ಯಾಬಿನೆಟ್ ಮುಂದೆ ಪ್ರಸ್ತಾವನೆ ತಂದು ಕೋರ್ಟಿಗೆ ಅಫಿಡೆವಿಟ್ ಕೊಟ್ಟು, ಆ ರೈತರನ್ನು ಉಳಿಸುವಂಥ ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನನಗೆ ಇವತ್ತು ಬಹಳ ದು:ಖವಾಗುತ್ತಿದೆ. ಏಕೆಂದರೆ ಆ ಭಾಗದ ಶಾಸಕನಾಗಿದ್ದೇನೆ. ದಿನಬೆಳಗಾದರೆ ರೈತರು ಕಣ್ಣೀರನ್ನು ಹಾಕುತ್ತಿದ್ದಾರೆ. ಆ ರೈತರನ್ನು ಉಳಿಸಬೇಕಾದರೆ ನಾನು ಎಲ್ಲಿಗೆ ಹೋಗಬೇಕು ಹೇಳಿ. ಅವರು ನೇಣು ಹಾಕಿಕೊಳ್ಳಬೇಕೇನು?

ಅಧ್ಯಕ್ಷರು: ಅವರನ್ನು ಉಳಿಸಬೇಕೆಂದರೆ ನೀವುಗಳೆಲ್ಲ ಜೈಲಿಗೆ ಹೋಗಬೇಕು.

ಶ್ರೀ ಬಿ.ಬಿ. ನಿಂಗಯ್ಯ: ಆ ರೀತಿಯಾಗಬಾರದೆಂದರೆ ಸರ್ಕಾರ ಕೂಡಲೇ ರೈತರ ನೆರವಿಗೆ ಬರಬೇಕು. ಅವರ ಭೂಮಿಯನ್ನು ಉಳಿಸಬೇಕು. ಒಕ್ಕಲೆಬ್ಬಿಸುವುದನ್ನು ತಡೆಯಬೇಕು. ಅಫಿಡವಿಟ್ ಹಾಕಿ ಅವರನ್ನು ಉಳಿಸಿಕೊಳ್ಳಬೇಕು ಎಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ನಾನು ಒಂದೆರಡು ವಿಚಾರಗಳನ್ನು ಮಾತ್ರ ಹೇಳಿಬಿಡುತ್ತೇನೆ. ಈಗೇನು ಅಲ್ಲಿ ರೈತರು ಸಾಗುವಳಿಯನ್ನು ಮಾಡಿದ್ದಾರಲ್ಲ ಆ ಭೂಮಿಯನ್ನು ಇವರು ಬೇಕಾದರೆ ಕಬ್ಜಾ

ತೆಗೆದುಕೊಳ್ಳಲಿ. ಆದರೆ ಆ ರೀತಿ ಅಮಾನವೀಯವಾಗಿ ಮರಗಳನ್ನು ಕಡಿದು ಹಾಕುವುದಿದೆಯಲ್ಲ, ಆ ಹಸಿರನ್ನು, ಕಾಡನ್ನು, ಅದು ಅಲ್ಲಿ ಇರುವಂಥ ಬೆಳೆಯ ರಕ್ಷಣೆ ಮಾಡ ಬೇಕಾಗಿರುವಂಥದ್ದನ್ನು ಕಡಿದು ಹಾಕುವುದಿದೆಯಲ್ಲ, ಅದು ಸರಿಯಲ್ಲ.

ಅಧ್ಯಕ್ಷರು: ಹಕ್ಕುಪತ್ರ ತೆಗೆದುಕೊಂಡವರು ಅಲ್ಲಿ ಸಾಗುವಳಿಯನ್ನು ಏಕೆ ಮಾಡಿಲ್ಲ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಸಾಗುವಳಿ ಮಾಡಿದ್ದಾರೆ. ಸಾಗುವಳಿ ಮಾಡಿರುವುದನ್ನು ಇವರು ಕಡಿದು ಹಾಕುತ್ತಿದ್ದಾರೆ. ಈಗ ಕಳಸೇಶ್ವರದಲ್ಲಿ 95 ಎಕರೆಯಲ್ಲಿ ಮಾಡಿರುವುದನ್ನು ಕಡಿದು ಹಾಕುತ್ತಿದ್ದಾರೆ. ಈ ರೀತಿ ಕಡಿದು ಹಾಕುವುದು ಅಮಾನವೀಯವಾದಂಥದ್ದು. ಹಸಿರನ್ನು ಹಾಳು ಮಾಡುವಂಥದ್ದು. ಕಡಿದು ಹಾಕುವಂಥದ್ದನ್ನು ಏಕೆ ಮಾಡಬೇಕು?

ಶ್ರೀ ಬಿ.ಬಿ. ನಿಂಗಯ್ಯ: ಮರಗಳನ್ನು ಕಡಿಯುವುದೇ ಬೇಡ. ಅದನ್ನು ಉಳಿಸಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕಡಿಯುವುದು ಬೇಡ. ನಾಳೆ ಬೆಳಿಗ್ಗೆಯಿಂದಲೇ ಅಲ್ಲಿ ಮತ್ತೆ ಅವರು ಅಲ್ಲಿಗೆ ಹೋಗಿ ಮರಗಳನ್ನು ಕಡಿಯುತ್ತಾರೆ ಎನ್ನುವ ವಿಚಾರ ಇದೆ. ಈಗ ಆ ರೀತಿಯಾಗಬಾರದು ಎನ್ನುವುದು ನಮ್ಮ ಮೊದಲನೆಯ ವಿಚಾರ. ಇನ್ನು ಎರಡನೆಯ ವಿಷಯವೆಂದರೆ, ಈಗ ಇವರೇನು ಅಫಿಡವಿಟ್ ಕೊಟ್ಟು ಕೈಕಟ್ಟಿಹಾಕಿಕೊಂಡು ರೈತರನ್ನು ಉರುಳು ಹಾಕುತ್ತಿದ್ದಾರೆ ಅದನ್ನು ನಿಲ್ಲಿಸುವುದಕ್ಕೆ ತಕ್ಷಣ ಅಗತ್ಯ ಕ್ರಮವನ್ನು ಕಾನೂನು ಸಚಿವರು, ಕಂದಾಯ ಸಚಿವರು ಮತ್ತು ಅರಣ್ಯ ಸಚಿವರುಗಳೆಲ್ಲರೂ ಸೇರಿ ತೆಗೆದುಕೊಳ್ಳಬೇಕು. ಇಲ್ಲದೇ ಹೋದರೆ ಈಗಾಗಲೇ ಮಲೆನಾಡಿನಲ್ಲಿ ಅಡಿಕೆ ಸಮಸ್ಯೆ ಬೇರೆ ಇದೆ, ಕಸ್ತೂರಿ ರಂಗನ್ ಸಮಸ್ಯೆ ಬೇರೆ ಇದೆ, ಒತ್ತುವರಿ ಸಮಸ್ಯೆ ಬೇರೆ ಇದೆ, ಈ ರೀತಿಯಾದರೆ ನಾವು ಮಲೆನಾಡಿನವರು ಎಲ್ಲಿಗೆ ಹೋಗಬೇಕು?

ಅಧ್ಯಕ್ಷರು: ನಾನು ಹೇಳಲೆ, ಇದು ಹುಟ್ಟಿದ್ದು ತೀರ್ಥಹಳ್ಳಿ ತಾಲ್ಲೂಕಿನಲ್ಲೊಂದು ಕಣಿವೆ ಎಂದಿದೆ. ಅಲ್ಲಿ ಹುಟ್ಟಿದ್ದು. ಪಕ್ಕ ಪಕ್ಕದಲ್ಲಿಯೇ ಇದೆಯೆಂದು ಅವರವರೇ ವ್ಯಾಜ್ಯ ಮಾಡಿಕೊಂಡರು. ಅವನದ್ದನ್ನು ತೆಗೆಯಬೇಕೆಂದು ಇವನು, ಇವನದ್ದನ್ನು ತೆಗೆಯಬೇಕೆಂದು ಅವನು, ಹೀಗೆ ಹೇಳಿ ಹೈಕೋರ್ಟಿಗೆ ಬಂದು ಕೇಸ್ ಹಾಕಿಕೊಂಡು ಇಡೀ ಊರಿನವರದ್ದೆಲ್ಲವನ್ನೂ ತೆಗೆಯುವುದಕ್ಕೆ ಮಾಡಿದ ವ್ಯವಹಾರ ಇದಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಸರ್ಕಾರಕ್ಕೆ ವಿವೇಚನೆ ಇರಬೇಕಲ್ಲವೆ, ಅಧ್ಯಕ್ಷರೆ? ಅವರು ಯಾರು ಏನೋ ಮಾಡಿಕೊಳ್ಳುತ್ತಾರೆ. ಆದರೆ ಸರ್ಕಾರ ವಿವೇಚನೆಯಿಂದ ವರ್ತಿಸಬೇಕಾಗುತ್ತದೆ. ಇಲ್ಲದಿದ್ದರೆ ಇದರಿಂದ ಏನಾಗುತ್ತದೆ ಹೇಳಿ, ಈಗಲೇ ನಕ್ಸಲ್ ಚಳುವಳಿ ಇತ್ಯಾದಿಗಳೆಲ್ಲ ಹೇಗೆ ಬೆಳೆಯುತ್ತಿದೆ ಎಂಬುದನ್ನು ನೋಡುತ್ತಿದ್ದೇವೆ. ಇದೇ ರೀತಿಯಾದರೆ ಇದು ಇನ್ನೂ ದೊಡ್ಡ ಪ್ರಮಾಣದಲ್ಲಿ ನಡೆಯುತ್ತದಷ್ಟೆ. ಆದುದರಿಂದ ಸರ್ಕಾರ ಇದರ ಬಗ್ಗೆ ಬಹಳ ಗಂಭೀರವಾಗಿ ಯೋಚನೆ ಮಾಡಬೇಕು. ಪಾರ್ಲಿಮೆಂಟ್ ಚುನಾವಣೆ ಬರುತ್ತಿದೆಯೆಂದು ಏನೋ ಒಂದು ನಾಲ್ಕು ಹೇಳಿಕೆ ಕೊಟ್ಟು ದೂಡತಕ್ಕಂಥ ಕೆಲಸವಾಗಬಾರದು. ಆದರೆ ಕಾನೂನು ಕಾಯುವುದಿಲ್ಲ. ಕಾನೂನು ತನ್ನದೇ ಆದ ಕ್ರಮಗಳನ್ನು ತೆಗೆದುಕೊಳ್ಳುತ್ತಿರುತ್ತದೆ. ಈಗ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಈ ಸಲುವಾಗಿಯೇ ಶೀಘ್ರವಾಗಿ ಕೆಲವೊಂದು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ, ಅದು ನಡೆದಿದೆ, ಇದು ನಡೆದಿದೆ ಎಂದು ಬೀಸೊ ದೊಣ್ಣೆ ತಪ್ಪಿಸಿಕೊಳ್ಳುವುದಕ್ಕೆ ನೀವು ಹೇಳುತ್ತಿದ್ದೀರಿ. ನಿಜವಾಗಿಯೂ ನೀವು ಹೇಳಿದ ಕ್ರಮಗಳ ಜಾರೀಕರಣ ಕೃತಿಯಲ್ಲಿ ಆಗಬೇಕೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು: ಮಾನ್ಯ ಸಚಿವರೆ, ಉತ್ತರ ಹೇಳಿ,

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಮಾತನಾಡಿಬಿಡುತ್ತೇನೆ. ಈಗ ಒಂದು circular ಕೊಟ್ಟಿದ್ದಾರೆ.

ಅಧ್ಯಕ್ಷರು: Eviction ಗೆ ಸಂಬಂಧಪಟ್ಟಿದ್ದೆ.?

ಶ್ರೀ ಕೆ.ಜಿ. ಬೋಪಯ್ಯ: Eviction ಯಾವುದನ್ನು ಮಾಡಬೇಕೆಂದು ಒಂದು ಲಿಸ್ಟ್ ಕೊಟ್ಟಿದ್ದಾರೆ, ದಯವಿಟ್ಟು, affidavit ಕೊಡುವುದನ್ನು ನಿಲ್ಲಿಸಿ, ಕೋರ್ಟ್‌ನವರು ಮಾಡಿರುತ್ತಾರೆ, ನೀವು ಅದಕ್ಕೆ time ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆ? ಮೊನ್ನೆ ಒಂದು ಕೇಸ್‌ನಲ್ಲಿ ವಾರಂಟ್ ಬರುತ್ತಾ ಇದೆ ಎಂದು ಹೇಳುತ್ತಾರೆ. ಎಲ್ಲಾದಕ್ಕೂ ಕೋರ್ಟ್ ಕೋರ್ಟ್ ಎಂದು ಹೇಳಿದರೆ ಹೇಗೆ? ಅಧಿಕಾರಿಗಳು ಕೋರ್ಟ್ ಎಂದು ಹೇಳಿ ನಿಮ್ಮನ್ನು ಹೆದರಿಸುತ್ತಾರೆ. ಅದನ್ನು ನಾವು ಜನಪ್ರತಿನಿಧಿಗಳು face ಮಾಡಬೇಕು. ಅವರು ಹೇಳಿದ ಹಾಗೆ ಕೇಳುವುದಲ್ಲ. ದಯವಿಟ್ಟು ನೀವು affidavit ಕೊಡಬೇಡಿ. ನೀವು eviction ಮಾಡದ ಹಾಗೆ ಹೇಳಿ. ಇದನ್ನು ಬೇಕಾದರೆ ನಮ್ಮ ನಿರ್ಣಯ ಎಂದು ತೆಗೆದುಕೊಳ್ಳಿ, ನಮ್ಮನ್ನೆಲ್ಲ ಜೈಲಿಗೆ ಹಾಕುತ್ತಾರಾ? ಹಾಕಲಿ. ಏನಿದು? ನೂರು ವರ್ಷದಿಂದ ಇನಾಂ ಲ್ಯಾಂಡ್ ಇದೆ. ಯಾವುದೋ ನೋಟಿಫಿಕೇಷನ್ ಇಟ್ಟುಕೊಂಡು ಈ ರೀತಿ ಮಾಡಿದರೆ ಹೇಗೆ? ಇಬ್ಬರು ಮರ ವ್ಯಾಪಾರಸ್ಥರ ಜಗಳಕ್ಕೆ ಹೋಗಿ ಇಡೀ ಜನರನ್ನು ಹಾಳು ಮಾಡುವುದು ಎಂದರೆ, ಇದು ಯಾವ ನ್ಯಾಯ?

ಅಧ್ಯಕ್ಷರು: ಇದಕ್ಕೆ ಯಾವ ಸಚಿವರು ಉತ್ತರ ಹೇಳುತ್ತೀರಿ, ಹೇಳಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಮಾನ್ಯ ಅಧ್ಯಕ್ಷರೆ, ಇದು ಬಹಳ ಸೂಕ್ಷ್ಮವಾದಂತಹ ಮತ್ತು ಬಹಳ ಗಂಭೀರವಾದಂತಹ ವಿಚಾರ. ನಾವೂ ಕೂಡ ರೈತರ ಮತ್ತು ಗೇಣಿದಾರರ ಪರ ಇರತಕ್ಕವರು, ಇದರಲ್ಲಿ ಎರಡನೇ ಮಾತಿಲ್ಲ. ನಮ್ಮ ಸಹೋದ್ಯೋಗಿಯಾದ ಮಾನ್ಯ ಶಿವಕುಮಾರ್‌ರವರು ಹೋರಾಟ ಮಾಡಿದ್ದೇವೆಂದು ಹೇಳಿದರು. ಆದರೆ ಯಾವ ಹಂತದಲ್ಲಿದ್ದೇವೆಂದು ಕುಳಿತುಕೊಂಡು ಚರ್ಚೆ ಮಾಡಬೇಕಾಗಿದೆ. ನೀವು serious ಆಗಿ ಯೋಚನೆ ಮಾಡಬೇಕಾದಂತಹ ವಿಚಾರ. ಮಾನ್ಯ ಸಭಾಧ್ಯಕ್ಷರು ಹೇಳಿದ ಹಾಗೆ ನಿಮ್ಮ ನಿಮ್ಮ ಒಳಜಗಳದಿಂದ ನ್ಯಾಯಾಲಯಕ್ಕೆ ಹೋಗಿದ್ದೀರಿ. ಅದನ್ನು ತೀರ್ಮಾನ ಮಾಡಬಹುದಾಗಿತ್ತು. ಇದು ಕೋರ್ಟ್‌ನಲ್ಲಿ ಯಾವ ಹಂತದಲ್ಲಿದೆ ಎಂದು ನೋಡಬೇಕು. ಇದರ ಬಗ್ಗೆ ಸಮಸ್ಯೆಯನ್ನು ನೋಡುತ್ತಿದ್ದೇವೆ. ಇದು ಚಿಕ್ಕಮಗಳೂರು ಜಿಲ್ಲೆಯ ಕುಡುಗೂರಿನ ಕಸಬಾ ಹೋಬಳಿಯಲ್ಲಿರುವಂತಹ

ಇನಾಂ ಜಮೀನು. ಅವರು ಇದು ಎಲ್ಲಿಂದ ಬಂತು, ಹೇಗೆ ಬಂತು? ಏನಾಯಿತು ಎಂದು ಕೂಡ ಹೇಳಿದರು. ನಾವೂ ಕೂಡ ಇದು ಆಗುವುದಿಲ್ಲ, ಅಲ್ಲಿ evict ಮಾಡಿಸಬೇಕೆನ್ನುವ ರೀತಿಯಲ್ಲಿ ನಾನಾಗಲಿ ಅಥವಾ ನಮ್ಮ ಅರಣ್ಯ ಸಚಿವರಾಗಲಿ ಖಂಡಿತ ಇಲ್ಲ. ಇದರ ಹಿನ್ನೆಲೆ ನೋಡಿಕೊಂಡು ಇವತ್ತಿನ ಪರಿಸ್ಥಿತಿ ಏನಿದೆ ಎಂದು ಅರ್ಥ ಮಾಡಿಕೊಂಡು ಮಾತನಾಡಬೇಕಾಗಿದೆ. ಈ ಇನಾಂ ಜಮೀನಿಗೆ ಸಂಬಂಧಪಟ್ಟಂತೆ 2012ರಲ್ಲಿ ಕೋರ್ಟ್ ಏನು ತೀರ್ಪು ಕೊಟ್ಟಿದೆ ಎಂದು ಮಾನ್ಯ ಕುಮಾರಸ್ವಾಮಿಯವರೂ ಕೂಡ ಹೇಳಿದರು. 2005ರಲ್ಲಿ writ application ಕೋರ್ಟ್‌ಗೆ ನಮ್ಮ ಪರ ಹಾಕಿದ್ದೇವೆ. ಆದೇಶದಲ್ಲಿ ಇನಾಂ ಜಮೀನಿಗೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳಿಗೆ ಭೂಮಂಜೂರಾತಿ ಮತ್ತು ಜಮೀನಿನಲ್ಲಿ ಆಗಿರುವ ಒತ್ತುವರಿಯನ್ನು ತೆರವುಗೊಳಿಸುವಂತೆ ಸೂಚಿಸಲಾಗಿದೆ. ಇದು ಕೋರ್ಟ್‌ನ ಆದೇಶ. ಆದರೆ ಪ್ರಸ್ತುತ ಯಾರು ಇದರಿಂದ ಬಾಧಿತರಾದವರು ಉಚ್ಚ ನ್ಯಾಯಾಲಯದಲ್ಲಿ ಒಂದು Review Petition ಅನ್ನು ದಾಖಲಿಸಿದ್ದು, ಅದು ವಿಚಾರಣೆ ಹಂತದಲ್ಲಿದೆ. ಯಾರಿಗೆ affect ಆಯಿತು, ಅವರು Review Petition ಕೋರ್ಟ್‌ಗೆ ಹಾಕಿದ್ದಾರೆ. ಈ ತೀರ್ಪಿನ ಪ್ರಮುಖ ಅಂಶಗಳೆಂದರೆ ಬಹಳ ಮುಖ್ಯವಾಗಿ 'ಮಾನ್ಯ ಉಚ್ಚ ನ್ಯಾಯಾಲಯವು ಈ ಇನಾಂ ಜಮೀನುಗಳನ್ನು ಅರಣ್ಯ ಭೂಮಿಯೆಂದು ಘೋಷಿಸಿ, ಈ ಜಮೀನಿನಲ್ಲಿರುವ ಹಿಡುವಳಿದಾರರು ಮತ್ತು ಮಂಜೂರಿದಾರರನ್ನು ತೆರವುಗೊಳಿಸಿ ಕಾನೂನಿನಂತೆ ಕ್ರಮ ವಹಿಸಲು ಆದೇಶಿಸಲಾಗಿದೆ'.

ಅಧ್ಯಕ್ಷರು: ಮೊದಲನೆ ಪ್ಯಾರಾ ಏನಿದೆ ಎಂದು ಇನ್ನೊಂದು ಬಾರಿ ಹೇಳಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಮೊದಲನೆ ಪ್ಯಾರಾದಲ್ಲಿರುವುದನ್ನು ರಿಪೀಟ್ ಮಾಡಬೇಕೆ?

ಅಧ್ಯಕ್ಷರು: ಹೌದು.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಈ ತೀರ್ಪಿನ ಪ್ರಮುಖ ಅಂಶಗಳೆಂದರೆ ಮಾನ್ಯ ಉಚ್ಚ ನ್ಯಾಯಾಲಯವು ಈ ಇನಾಂ ಜಮೀನುಗಳನ್ನು ಅರಣ್ಯ ಭೂಮಿಯೆಂದು ಘೋಷಿಸಿ...

ಅಧ್ಯಕ್ಷರು: ಅದನ್ನು ಯಾರು ಮಾಡಬೇಕು? ಸರ್ಕಾರ ಮಾಡಬೇಕು.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಸರ್ಕಾರ ಮಾಡಬೇಕು. ಸರ್ಕಾರ ಕೋರ್ಟ್ ಮುಂದೆ ಹೋದಾಗ ಏನಾಗುತ್ತದೆ? ಕೋರ್ಟ್ observations ಬೇರೆ ಇರುತ್ತದೆ. ನೀವು ಹೋಗದಿದ್ದರೆ ಸರಿ, ನೀವು ಮಾಡಿಕೊಳ್ಳಿ. ಆದರೆ ಕೋರ್ಟ್ ಮುಂದೆ ಹೋದಾಗ, ಅವರು ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಚರ್ಚೆಗಳಾಗಿ, ನಮ್ಮ ಪರವಾಗಿ ವಕೀಲರು, Advocate General ಹೋಗಿ, ಅದರ ಬಗ್ಗೆ ವಾದವಿವಾದಗಳಾಗಿ ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಮುಂದಿನದೆಲ್ಲ ದಾಖಲೆ ಇದೆ, ಏಕಾಏಕಿ ಅರಣ್ಯ ಎಂದು ಘೋಷಣೆ ಮಾಡಿಲ್ಲ, ಅದಕ್ಕೆ ಹೇಳಿದೆ. ಉಚ್ಚ ನ್ಯಾಯಾಲಯದಲ್ಲಿ ಇದು ಅರಣ್ಯಕ್ಕೆ ಸೇರಿದ ಭೂಮಿ ಎಂದು ಮಾಡಿದ್ದಾರೆ. ಈ ತೀರ್ಮಾನ ಬಂದ ಮೇಲೆ ಒಂದು Public Interest Litigation ಕೂಡ ಹಾಕಿದ್ದಾರೆ. ಅದರಲ್ಲಿ ಏನು ಹೇಳಿದ್ದಾರೆಂದು ಒತ್ತುವರಿಗೆ ಸಂಬಂಧಿಸಿದಂತೆ, ಮಾನ್ಯ ಎ.ಟಿ. ರಾಮಸ್ವಾಮಿ ಮತ್ತು ಬಾಲಸುಬ್ರಮಣಿಯನ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಜಮೀನು ಸಂರಕ್ಷಣ ಕಾರ್ಯಪಡೆ ಸಲ್ಲಿಸಿರುವ ವರದಿಗಳ ಅನುಷ್ಠಾನದ ಬಗ್ಗೆ ಇದ್ದು, ರಿಟ್ ಅರ್ಜಿ ಪ್ರಕರಣ ದಿನಾಂಕ 3/1/2014 ರಲ್ಲಿ ಎಂದರೆ ಜನವರಿಯಲ್ಲಿ ವಿಚಾರಣೆಗೆ ಬಂದ ಸಮಯದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಗಮನಿಸಿರುವ ಅಂಶ ಮುಂದಿರುತ್ತದೆ. ಜನವರಿ ಮೂರನೇ ತಾರೀಖು ಎ.ಟಿ. ರಾಮಸ್ವಾಮಿ ಮತ್ತು ಬಾಲಸುಬ್ರಮಣಿಯನ್ ವರದಿಯ ಹಿನ್ನೆಲೆಯಲ್ಲಿ ಕೋರ್ಟ್‌ನಲ್ಲಿ ಅದನ್ನು ಪ್ರಶ್ನೆ ಮಾಡಿದ್ದರು, ಅದು ದಿನಾಂಕ 03.01.2014ರಲ್ಲಿ ವಿಚಾರಣೆಗೆ ಬಂದು ಕೋರ್ಟ್ ಹೇಳಿರುವುದನ್ನು ನಾವು ಪ್ರಮುಖವಾಗಿ ನೋಡುತ್ತಿದ್ದೇವೆ. ಇದರಲ್ಲಿ ಕೋರ್ಟ್ ಏನು ಹೇಳಿದೆ ಎಂದು ನಾವು ಬಹಳ ಪ್ರಮುಖವಾಗಿ ನೋಡಬೇಕು.

"In view of the statement made by the learned Advocate General that respective Deputy Commissioners of each district of the

state are already called upon and instructed to furnish the necessary date of encroachment on the Government land and prepare localite action plan for removal thereof and the overall plans of actions with necessary details may be ready within the period of one month. The hearing is adjourned to 10.2.2014, by which time Some result of the drive initiated by the Government in Bangalore North Taluk and other areas as well, may also be available. In the meantime, it will be open for the state authorities and the learned Advocate General to call for necessary meetings with or without participation of learned counsel for the petitioners". ಎಂದು ಆರ್ಡರ್ ಮಾಡಿದ್ದಾರೆ. ಇದಕ್ಕೆ ದಿನಾಂಕ 10.02.2014 ರೊಳಗೆ ಬೆಳವಣಿಗೆ ಏನಾಗಿದೆ ಎನ್ನುವುದರ ಬಗ್ಗೆ ಹೈಕೋರ್ಟ್‌ನಲ್ಲಿ affidavit ಹಾಕಬೇಕು. ಈ ಹಂತದಲ್ಲಿ ನಾನೂ ಕೂಡ ಇದರ ಬಗ್ಗೆ ಯೋಚನೆ ಮಾಡುತ್ತಿದ್ದೇನೆ ಮತ್ತು ಕಾನೂನು ಮಂತ್ರಿಗಳ ಜೊತೆ ಇದರ ಬಗ್ಗೆ ಚರ್ಚೆ ಮಾಡಿದೆನು. ನಾಳೆ ಅಡ್ವೋಕೇಟ್ ಜನರಲ್‌ರವರನ್ನು ಕರೆಸಿ ಮಾತನಾಡೋಣ. Revenue and Forest Departmentಗೆ ಸಂಬಂಧಪಟ್ಟವರನ್ನು ದಿನಾಂಕ 10.02.2014ಕ್ಕೆ ಕೋರ್ಟ್‌ಗೆ ಹೋಗುವುದಕ್ಕಿಂತ ಮೊದಲೇ ಏನು ಮಾಡಬೇಕು ಎಂದು ತಾವು ಹೇಳಿದಂತೆ ಚರ್ಚೆ ಮಾಡಬೇಕು ಮತ್ತು ಅಲ್ಲಿ affidavit ಮಾಡುವುದು ಹೇಗೆ ಎಂದು ನೋಡಬೇಕು. Deputy Commissionersಗೆ ಬಹಳ strict ಆಗಿ instructions ಕೊಟ್ಟಿದ್ದಾರೆ. ಅವರು action plan ಮಾಡಿಕೊಂಡು ಹೋಗಬೇಕಾಗಿದೆ. ಕೋರ್ಟ್‌ನವರು ಏನು ಪ್ರೋಗ್ರೆಸ್ ಆಗಿದೆ ಕೊಡಿ ಎಂದು ಕೇಳಿದ್ದಾರೆ. ಅದಕ್ಕೆ ಅವರು ಅದನ್ನು ಕೋರ್ಟ್‌ಗೆ ಕೊಡಬೇಕಾಗಿದೆ. ಹಾಗಾಗಿ ಮಾನ್ಯ ಉಚ್ಚ ನ್ಯಾಯಾಲಯ ಗಮನಿಸಿರುವ ಅಂಶಗಳ ಅನ್ವಯ ಆ ಒತ್ತುವರಿಯನ್ನು ತೆರವುಗೊಳಿಸಲು ಜಿಲ್ಲಾಧಿಕಾರಿಗಳು ಕಾಲಬದ್ಧ ಕ್ರಿಯಾಯೋಜನೆ ಸಿದ್ಧಪಡಿಸಲು ಸರ್ಕಾರದ ಸುತ್ತೋಲೆ ದಿನಾಂಕ 23.12.2000 ಅನ್ವಯ ನೀಡಿರುವ ಸೂಚನೆಗಳ ಅನುಸಾರ ಕರ್ನಾಟಕ ಭೂ ಕಂದಾಯ ಕಾಯಿದೆ ಕಲಂ 94 (A) and 94 (B) ಪ್ರಕಾರ ಅಕ್ರಮ ಸಾಗುವಳಿ ಸಕ್ರಮ ಕೋರಿ ನಮೂನೆ 50 ಮತ್ತು

53 ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ಇನ್ನೂ ಇತ್ಯರ್ಥವಾಗದೇ ಬಾಕಿಯಿರುವ ಪ್ರಕರಣಗಳನ್ನು ಹಾಗೂ ನ್ಯಾಯಾಲಯದಲ್ಲಿ ತಡೆಯಾಜ್ಞೆಯಿರುವ ಪ್ರಕರಣಗಳನ್ನು ಹೊರತು ಪಡಿಸಿ, ಇವೆರಡೂ ಬಹಳ ಮುಖ್ಯ. ಉಳಿದ ಒತ್ತುವರಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾತ್ರ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಂದ ಒತ್ತುವರಿ ತೆರವುಗೊಳಿಸುವ ಬಗ್ಗೆ ಕ್ರಿಯಾ ಯೋಜನೆಯನ್ನು ಪಡೆಯಲಾಗುತ್ತಿದೆ. ನಮೂನೆ 50 ಮತ್ತು 53ರಲ್ಲಿದ್ದರೆ, dispute ಇದ್ದರೆ ಅಂಥಾದ್ದರ ಬಗ್ಗೆ ತಕರಾರಿಲ್ಲ. ಉಳಿದದ್ದು ಕೊಡಿ ಎನ್ನುವ ರೀತಿಯಲ್ಲಿ ಹೇಳಿದ್ದಾರೆ. PILನಲ್ಲಿ ಮಾನ್ಯ ಉಚ್ಚನ್ಯಾಯಾಲಯವು ಅರಣ್ಯ ಪ್ರದೇಶದಲ್ಲಿರುವ ಎಲ್ಲಾ ಒತ್ತುವರಿಯನ್ನು ತೆರವುಗೊಳಿಸಲು ಸೂಚಿಸಿರುತ್ತದೆ. ಈ ಬಗ್ಗೆ ಅರಣ್ಯ ಮತ್ತು ಕಂದಾಯ ಇಲಾಖೆಯಿಂದ ಒತ್ತುವರಿಯನ್ನು ತೆರವುಗೊಳಿಸಲು ನ್ಯಾಯಾಲಯವು ನೀಡಿದ ಅವಧಿಯೊಳಗೆ affidavit ಮೂಲಕ ಕ್ರಿಯಾಯೋಜನೆಯನ್ನು ಸಲ್ಲಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ. ಈಗ ಏನು ಮಾಡಬೇಕೆಂದು ಇದೆ. ಕೊನೆಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ನಾವು ಕ್ರಮ ತೆಗೆದುಕೊಳ್ಳುವುದು ಅಗತ್ಯವಾಗಿರುತ್ತದೆ ಎನ್ನುವುದು ನಮಗೆ ಬಂದಿರತಕ್ಕಂಥ ನಿರ್ಣಯ. ಈಗ ಹೈಕೋರ್ಟ್‌ನಲ್ಲಿ ಈ ರೀತಿ ಇರುವಂತಹ ಹಿನ್ನೆಲೆಯಲ್ಲಿ ನಾವು ಏನು ಮಾಡಬೇಕೆಂದು ಯೋಚನೆ ಮಾಡಬೇಕಾಗಿದೆ. ಈಗ ಮಾನ್ಯ ಬಿ.ಬಿ. ನಿಂಗಯ್ಯನವರು ಒಂದು ವಿಚಾರ ಹೇಳಿದರು. ಅವರು ಕೊಟ್ಟಂತಹ ಸಲಹೆ ಪ್ರಕಾರ ಹಿಂದೆ ಕುದುರೆ ಮುಖ ಯೋಜನೆಯವರಿಗೆ ಜಮೀನು ಕೊಟ್ಟಿದ್ದರು, ಅವರಿಗೆ lease period expire ಆಗಿದೆ, ಪಕ್ಕದಲ್ಲೇ ಇದೆ, alternative ಆಗಿ forestನವರಿಗೆ ಅಲ್ಲಿಯೇ ಏಕೆ ಕೊಡಬಾರದು ಎಂದು ಸಲಹೆ ಮಾಡಿದಿರಿ. ಅದಕ್ಕೋಸ್ಕರ ಆಗಲೇ ನಾನು ಹೇಳಿದಂತೆ ನಮ್ಮ Advocate General ಹತ್ತಿರ ಮತ್ತು Law Minister ಹತ್ತಿರ ಈ ಹಂತದಲ್ಲಿ ಏನು ಮಾಡಬಹುದು ಎಂದು ಚರ್ಚೆ ಮಾಡುತ್ತೇನೆ. ನಾವೂ ಕೂಡ ನಮ್ಮ ರೈತರನ್ನು ಯಾವ ರೀತಿ protect ಮಾಡಬೇಕು? ಅವರನ್ನು evict ಮಾಡದೇ ತಾತ್ಕಾಲಿಕವಾಗಿ ಏನು ಮಾಡಬೇಕು? ಅಥವಾ ನ್ಯಾಯಾಲಯಕ್ಕೆ ಮತ್ತೆ convince ಮಾಡುವುದಕ್ಕೆ ಏನಾದರೂ ಸಾಧ್ಯವಿದೆಯೇ? ಎಲ್ಲಾ ಸಾಧ್ಯತೆಗಳ ಬಗ್ಗೆ ನಾವು ಮಾತು

ಕತೆಯನ್ನು ನಡೆಸೋಣ, ಅದರ ಬಗ್ಗೆ ತೀವ್ರವಾಗಿ ಚರ್ಚೆ ಮಾಡೋಣ, ಈ ವಿಷಯವನ್ನು ತೆಗೆದುಕೊಳ್ಳೋಣ ಎನ್ನುವುದರ ಗಂಭೀರತೆಯನ್ನು ನಾವು ಆಲೋಚನೆ ಮಾಡುತ್ತಿದ್ದೇವೆ. ಮಾನ್ಯ ಅರಣ್ಯ ಸಚಿವರೂ ಕೂಡ ಇಲ್ಲಿದ್ದಾರೆ. ನಾನೂ ಕೂಡ ಇದ್ದೇನೆ. ಅರಣ್ಯ ಇಲಾಖೆಯವರು ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು, ಅಡ್ವೊಕೇಟ್ ಜನರಲ್, ಕಾನೂನು ಸಚಿವರು ಎಲ್ಲರೂ ಕೂಡ ಕುಳಿತುಕೊಂಡು ಚರ್ಚೆ ಮಾಡುತ್ತೇವೆ. ಇವತ್ತು eviction ಮಾಡುವುದಕ್ಕೆ ಹೋಗಿದ್ದಾರೆನ್ನುವುದನ್ನು ಅವರು ಏನು ಹೇಳಿದರು, ನಾವು ಕೋರ್ಟ್‌ಗೆ ದಿನಾಂಕ 10.02.2014ರಂದು ಹೋಗುತ್ತೇವೆ. ಅಲ್ಲಿಗೆ ಹೋಗುವುದಕ್ಕೆ ಮೊದಲು ಸ್ವಲ್ಪ ಸಮಯ ತೆಗೆದುಕೊಂಡು ಏನಾದರೂ ಮಾಡುವುದಕ್ಕೆ ಸಾಧ್ಯವೇ ಎಂದು ಕುಳಿತು ಚರ್ಚೆ ಮಾಡಿ ನಾವು ಪ್ರಯತ್ನ ಮಾಡುತ್ತೇವೆ. ಇದನ್ನು ತಮಗೆ ಮನದಟ್ಟು ಮಾಡಿದ್ದೇನೆ, ಇವತ್ತು ಸದನಕ್ಕೂ ಹೇಳಿದ್ದೇನೆ. ನಾವು ಯಾವ ಹಂತದಲ್ಲಿದೆಯೆಂಬುದು ಸೂಕ್ಷ್ಮವಾದ ವಿಚಾರವೆಂಬುದನ್ನು ತಮ್ಮ ಗಮನಕ್ಕೆ ತಂದಿದ್ದೇನೆ.

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, 10ನೇ ಫೆಬ್ರವರಿಗೆ deadline ಇದೆಯಲ್ಲಾ?

ಅಧ್ಯಕ್ಷರು: ಮಾನ್ಯ ಬೋಪಯ್ಯನವರೆ, ಸ್ವಲ್ಪ ಹೇಳುವವರೆಗೂ ಕೇಳಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ತಾವೂ ಸಹ lawyer ಆಗಿದ್ದಂಥವರು. ಮಾನ್ಯ ಮುಖ್ಯಮಂತ್ರಿಯವರ ಸಮ್ಮುಖದಲ್ಲಿ, ಹಿರಿಯ ಅಧಿಕಾರಿಗಳೊಡನೆ ಎರಡೆರಡು ಸಾರಿ ಚರ್ಚೆ ಆಗಿದೆ. ಇದು ಸಮಸ್ಯೆ ಇದೆ, ತಮಗೆಲ್ಲಾ ಗೊತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಾವು ಮಾನ್ಯ ನಿಂಗಯ್ಯನವರು ಹೇಳಿದಂಥ ಮಾತನ್ನು ನೋಡಿದಾಗ, ಜಿಲ್ಲಾಧಿಕಾರಿಗಳು ಒಂದು ವರದಿಯನ್ನು ಕಳುಹಿಸಿದ್ದಾರೆ, 2,700 ಎಕರೆಯನ್ನು compensatory forest ಆಗಿ ಕೊಡಬಹುದೆನ್ನುವಂಥ ಮಾತನ್ನು ಹೇಳಿದ್ದಾರೆ. ಬಹುಶ: ಈ ವಿಷಯ ಸರ್ಕಾರದ ಮಟ್ಟದಲ್ಲಿ ಚರ್ಚೆಯಾದಂತೆ ನನಗೆ ಕಾಣಿಸುತ್ತಿಲ್ಲ. ಇದು ಅರಣ್ಯ ಜಮೀನು ಆಗಿರುವುದರಿಂದ ಮತ್ತು ಈಗಾಗಲೇ High Courtನಲ್ಲಿ

removalಗೆ ಏನೆಲ್ಲಾ action plan ಮಾಡಿದ್ದೀರಿ, ಇದೊಂದಕ್ಕೇ ಅಲ್ಲ, ಇಡೀ ರಾಜ್ಯಕ್ಕೆ ಸೇರಿರುವಂಥದ್ದಕ್ಕೆಲ್ಲಾ ಮಾಡಿದ್ದೀರಿ. ಅದನ್ನು 10ನೇ ಫೆಬ್ರವರಿಗೆ ಕೊಡಿ ಎಂದು ಹೇಳಿದ್ದಾರೆ. ಇದಕ್ಕೆ ಇನ್ನೂ time ಇದೆಯೆಂದು ನನಗನಿಸುತ್ತದೆ.

ಅಧ್ಯಕ್ಷರು: ನಾನು ಪ್ರಶ್ನೆಯನ್ನು ಕೇಳುತ್ತೇನೆ. ಮಾನ್ಯ ರಾಮಸ್ವಾಮಿಯವರ report ಮತ್ತು ಮಾನ್ಯ ಬಾಲಸುಬ್ರಮಣಿಯನ್ ರಿಪೋರ್ಟ್ ಇದೆಯಲ್ಲಾ, is it a Statute or an administrative report?

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಾನು ಆಗ ಆ ಭಾಗದಲ್ಲಿ ಕುಳಿತಿದ್ದೆ. ನನಗೆ ಇದೆಲ್ಲಾ ವಿಷಯಗಳು ಗೊತ್ತು. ಮಾನ್ಯ ರಾಮಸ್ವಾಮಿಯವರು ಕೊಟ್ಟಿರುವಂಥ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ, ತದನಂತರ ಮಾನ್ಯ ಬಾಲಸುಬ್ರಮಣಿಯನ್‌ರವರು ಕೊನೆ ದಿವಸ ಎನ್ನಬೇಕಾದರೆ ವರದಿಯನ್ನು release ಮಾಡಿದರು. ಆಗ ಸರ್ಕಾರ ಈ ವರದಿ ನಮ್ಮ ಕೈ ಸೇರಿಲ್ಲವೆಂದು ತೀರ್ಮಾನಕ್ಕೆ ಬಂತು, ಇದು ವರದಿಯೇ ಅಲ್ಲವೆಂದು ಹೇಳಿದರು. ಅದು ಆದನಂತರ ಮತ್ತೆ ಅದನ್ನು ಮುಂದುವರೆಸುವ ತೀರ್ಮಾನವನ್ನು ಮಾಡಬೇಕಾಗಿತ್ತು, ಅದು ಆಗಲಿಲ್ಲ.

ಅಧ್ಯಕ್ಷರು: ಹೈಕೋರ್ಟ್‌ನವರು ಆ ಅಭಿಪ್ರಾಯಕ್ಕೆ ಬರಬೇಕಾದರೆ, ಸರ್ಕಾರದ ಮಟ್ಟದಲ್ಲಿ ಆ ರಿಪೋರ್ಟ್‌ಗಳನ್ನು ಒಪ್ಪಿ, ಅದನ್ನು ಕಾರ್ಯರೂಪಕ್ಕೆ ತರಬೇಕೆಂಬ ತೀರ್ಮಾನ ಮಾಡದೇ, ಹೈಕೋರ್ಟ್ ತೀರ್ಮಾನ ಬರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಅದಕ್ಕೆ ನಾನು ಹೇಳುತ್ತಿರುವಂಥದ್ದು, ನನಗೆ ಈಗಷ್ಟೇ ಈ ಎಲ್ಲಾ ವಿಚಾರಗಳು ಗೊತ್ತಾಗುತ್ತಿದೆ. ನಾನು ಇಷ್ಟು ಮಾತ್ರ ಆಶ್ವಾಸನೆಯನ್ನು ಕೊಡಬಲ್ಲೆ. ನಾಳೆ, ನಾಡಿದ್ದು ಆಗುವುದಿಲ್ಲ, ಸೋಮವಾರ ಅಥವಾ ಮಂಗಳವಾರ Advocate General ಅವರನ್ನು ಕರೆದು, ಅರಣ್ಯ, ಕಂದಾಯ ಮತ್ತು ಕಾನೂನು ಈ ಮೂರು ಇಲಾಖೆಗಳ ಅಧಿಕಾರಿಗಳನ್ನು ಕರೆದು Deputy Commissionerರವರನ್ನು ಕರೆದು ಅವರ ಹತ್ತಿರ ಏನು ಮಾಹಿತಿ ಇದೆಯೆನ್ನುವುದನ್ನು ನೋಡಿ, ಅದನ್ನು

ಯಾವುದಾದರೂ ರೀತಿಯಲ್ಲಿ ಕೋರ್ಟ್‌ಗೆ ಮನವರಿಕೆ ಮಾಡಿಕೊಡುವಂಥ ಕೆಲಸವನ್ನು ಮಾಡಬಹುದು. ಇನ್ನೊಂದು ಬಹಳ ಮುಖ್ಯವಾಗಿ ಈ ಸರ್ಕಾರ ಈ ನಿರ್ಧಾರವನ್ನು ತೆಗೆದುಕೊಂಡ ಹಿನ್ನೆಲೆಯಲ್ಲಿ, ಮಾನ್ಯ ರವಿಯವರು ಈಗಾಗಲೇ Conservator forests ಹೋಗಿ ಅಲ್ಲಿ camp ಮಾಡಿದ್ದಾರೆಂದು ಹೇಳಿದರು. ಬಹುಶ: ನಾವು ಅವರಿಗೆ ಮಾಧ್ಯಮಗಳ ಮುಖೇನ ಮಾಹಿತಿಯನ್ನು ಕೊಡುತ್ತೇವೆ. ಇದು ಇಷ್ಟೇ ದಿವಸಗಳಾಗಿದೆ, ಇದನ್ನು ನಾಳೆಯೇ ಮಾಡಬೇಕೆನ್ನುವಂಥ ಪ್ರಶ್ನೆ ಏನಿಲ್ಲ. ಇನ್ನೂ ಕೂಡ plan of action ಅನ್ನು ಕೋರ್ಟ್ ಮುಂದೆ ಕೊಡುವಂಥ ಸಂದರ್ಭವಿರುವುದರಿಂದ ಅವರು ತಡೆಯಬಹುದು, ಯಾವುದೇ ರೀತಿಯ ತೊಂದರೆಯಾಗುವುದಿಲ್ಲ. ಇಲ್ಲಿ ಏನಾಗುತ್ತದೆಂದರೆ, ಅಧಿಕಾರಿಗಳು ಯಾವ ರೀತಿಯಲ್ಲಿ interpret ಮಾಡುತ್ತಾರೆಂದರೆ, ಇದು ವಿಧಾನ ಸಭೆಯಲ್ಲಿ ಚರ್ಚೆಯಾಗಿರಬಹುದು. ಇದಕ್ಕೆ ಸರ್ಕಾರಿ ಆದೇಶ ಬಂದಿದೆಯಾ ಎನ್ನುತ್ತಾರೆ. ಸರ್ಕಾರಿ ಆದೇಶವನ್ನು ಮಾಡಬೇಕೆಂದರೆ Contempt of Court ಆಗುತ್ತದೆಂದು ಹೆದರುತ್ತಾರೆ. ಆ ಕಾರಣಕೋಸ್ಕರ ನಾನು ಹೇಳುವಂಥದ್ದು ಏನೆಂದರೆ, ನಮಗೆ ಇನ್ನೂ 3–4 ದಿವಸಗಳ ಅವಕಾಶವನ್ನು ಕೊಟ್ಟರೆ ನಾವು ಮೂರು ಜನರು ಕುಳಿತು ಚರ್ಚೆ ಮಾಡಿ, Advocate General ಅವರೊಡನೆ ಚರ್ಚೆ ಮಾಡಿ, ಹೈಕೋರ್ಟ್‌ಗೆ ಯಾವುದಾದರೂ ರೀತಿಯಲ್ಲಿ convince ಮಾಡುವಂಥ ಕೆಲಸವನ್ನು ಮಾಡುತ್ತೇವೆ. ನನ್ನ ಬಳಿ ಮಾನ್ಯ ನಿಂಗಯ್ಯನವರೂ ಸಹ ಸಾಕಷ್ಟು ಬಾರಿ ಚರ್ಚೆ ಮಾಡಿದರು. ಈಗ ನನಗೆ ವಾಸ್ತವಿಕವಾಗಿರುವ ಸಂಗತಿ ಗೊತ್ತಾಗುತ್ತಿರುವಂಥದ್ದು, ಬಹುಶ: ಅಷ್ಟೊಂದು ಜನರನ್ನು ಒಕ್ಕಲೆಬ್ಬಿಸುವಂಥ ಕೆಲಸ, ಅದರ ಜೊತೆಗೆ ಈಗಾಗಲೇ ಬಹಳಷ್ಟು ಜನರನ್ನು ಒಕ್ಕಲೆಬ್ಬಿಸಿದ್ದಾರೆಂದು ಹೇಳಿದರೆ, ಅದಕ್ಕೆ ಅವಕಾಶ ಕೊಡುವಂಥದ್ದಲ್ಲ. ಯಾವುದೋ ಒಂದು ರೀತಿಯಲ್ಲಿ ಆ ರೈತರನ್ನು ರಕ್ಷಣೆ ಮಾಡುವಂಥ ಜವಾಬ್ದಾರಿಕೆ ನಮಗಿದೆ, ಇನ್ನು 3–4 ದಿವಸಗಳಲ್ಲೇ ಕರೆದು ಸ್ಪಷ್ಟವಾಗಿ ಒಂದು ತೀರ್ಮಾನವನ್ನು ಮಾಡಿ, ಕೋರ್ಟ್‌ನ ಮನ ಒಲಿಸುವಂಥ ಕೆಲಸವನ್ನು ನಾವು ಎಲ್ಲಾ ರೀತಿಯಲ್ಲಿ ಮಾಡುತ್ತೇವೆನ್ನುವಂಥ ಮಾತನ್ನು ಹೇಳುತ್ತೇನೆ.

ಶ್ರೀ ಬಿ.ಬಿ. ನಿಂಗಯ್ಯ: ಮಾನ್ಯ ಅಧ್ಯಕ್ಷರೆ, ನಾಳೆ eviction ಮಾಡದ ಹಾಗೆ ಆದೇಶ ಹೋಗಬೇಕು. ಆಮೇಲೆ ಕೇವಲ 1,800 ಎಕರೆ encroachment ಇದೆ, 2,700 ಎಕರೆ ಜಾಗ ಖಾಲಿ ಇದೆ, ಅಷ್ಟನ್ನು ಕೊಡಬಹುದು.

ಶ್ರೀ ಸಿ.ಟಿ. ರವಿ: ಕಳಸೇಶ್ವರ ದೇವಸ್ಥಾನದ ಇನಾಂ ಜಮೀನಿನ ವಿಚಾರ ಉಚ್ಚ ನ್ಯಾಯಾಲಯದಲ್ಲಿ pending ಇದೆ. ಈ pending ಇರುವಂಥದ್ದು ಇತ್ಯರ್ಥ ಆಗುವವರೆಗೂ ತೆರವುಗೊಳಿಸಬಾರದು.

ಅಧ್ಯಕ್ಷರು: ಆ ರೀತಿ ಏನಾದರೂ ಒಂದು ಅವಕಾಶವಿದ್ದರೆ ನೋಡಿ, ಇಬ್ಬರು ಸಚಿವರೂ ಸೇರಿ ಸದ್ಯಕ್ಕೆ eviction ಮಾಡುವುದನ್ನು ನಿಲ್ಲಿಸಿ, ದಯವಿಟ್ಟು ಮಾಡಿ, ದೇಶ ಏನು ಮುಳುಗಿ ಹೋಗುವುದಿಲ್ಲ, ನಿಮ್ಮನ್ನೇನೂ ಜೈಲಿಗೆ ಹಾಕುವುದಿಲ್ಲ, ಮಾಡಿ. ಆಮೇಲೆ ತಾವು ಹೇಳಿದ ಹಾಗೆ ಕುಳಿತು ಚರ್ಚೆ ಮಾಡಿ ಸಾಧಕ-ಬಾಧಕಗಳನ್ನು ನೋಡಿ ಒಂದು ತೀರ್ಮಾನಕ್ಕೆ ಬರೋಣ.

ಶ್ರೀ ಸಿ.ಟಿ. ರವಿ: ಕಳಸೇಶ್ವರ ಇನಾಂ ಜಮೀನಿನ eviction stop ಮಾಡಬೇಕು. ಇನ್ನೊಂದು affidavit ಕೊಟ್ಟು Courtಗೆ commit ಮಾಡಿಕೊಳ್ಳುತ್ತಿದ್ದಾರಲ್ಲಾ, ಅದನ್ನು stop ಮಾಡಲಿ.

ಅಧ್ಯಕ್ಷರು: ನಾನು ಈ ವಿಷಯವಾಗಿ ಹೇಳುವುದೇನೆಂದರೆ, ಎಲ್ಲಾ ಪಾರ್ಟಿಗಳ ಮುಖಂಡರು ಸೇರಿ, ಈಗ ಸಮಯವಿಲ್ಲ ನಾಳೆ, ನಾಡಿದ್ದು ಎರಡು ದಿವಸ ಕಾಲಾವಕಾಶವಿದ್ದಿದ್ದರೆ, ಅದಕ್ಕೆ ಇಲ್ಲೇ ಕುಳಿತು ಇತ್ಯರ್ಥ ಮಾಡಬಹುದಾಗಿತ್ತು. ಮಾನ್ಯ ಮುಖ್ಯಮಂತ್ರಿಯವರನ್ನು ಕಂಡು impress ಮಾಡಿ.

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಅಧ್ಯಕ್ಷರೆ, ತಮ್ಮ chambersನಲ್ಲೆ ಸಭೆ ಕರೆಯಿರಿ, ನಾವು ಮುಖ್ಯಮಂತ್ರಿರವರೆಲ್ಲರೂ ಬರುತ್ತೇವೆ.

ಅಧ್ಯಕ್ಷರು: ಅದು ಏನಾಗಿದೆಯೆಂದರೆ, ಕೆಲವು ವಿಚಾರಗಳನ್ನು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಅಧ್ಯಕ್ಷರೆ, ತಮಗೆ ಅಧಿಕಾರಿವಿದೆ, ತಾವು ಕರೆಯಿರಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಇವರು ಕೊಟ್ಟಿರುವಂಥ Form 50, 53 ನದು ಒಂದು.

ಅಧ್ಯಕ್ಷರು: ಅದು ಇದೆ, ಬಿಡಿ.

ಶ್ರೀ ಟಿ.ಬಿ. ಜಯಚಂದ್ರ: ಇದರ ಜೊತೆಗೆ ಅರಣ್ಯ ಹಕ್ಕು ಕಾನೂನಿನ ಅಡಿಯಲ್ಲಿ ಕೂಡ ಇದೆಯೆಂದು ಹೇಳಿದ್ದೀರಿ, ಅದನ್ನು ಸೇರಿಸಿ ಬಿಟ್ಟು ಇದಕ್ಕೆ ರಕ್ಷಣೆ ಕೊಡುವ ಸಾಧ್ಯತೆ ಇದೆ. ಇನ್ನು 3–4 ದಿವಸಗಳ ಕಾಲಾವಕಾಶವನ್ನು ಕೊಡಿ, ಇತ್ಯರ್ಥ ಮಾಡುತ್ತೇವೆಂದು ಹೇಳುತ್ತೇನೆ.

ಅಧ್ಯಕ್ಷರು: ಮಾಡಿ.

ಶ್ರೀ ಸಿ.ಟಿ. ರವಿ: ಅಲ್ಲಿವರೆಗೂ ನೀವು eviction ಮಾಡಬೇಡಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಆಗುವಂಥ ಚರ್ಚೆ ಮಾಧ್ಯಮಗಳಿಗೆ ಹೋಗುತ್ತದೆ. ನಮ್ಮ ಅಧಿಕಾರದ ವ್ಯಾಪ್ತಿಯಲ್ಲಿ ಅಧಿಕಾರಿಗಳು ಬರುತ್ತಾರೆ. ಇನ್ನು ಕೋರ್ಟ್‌ನಲ್ಲಿ 3–4 ದಿವಸಗಳಲ್ಲಿ ಅಂತಿಮ ತೀರ್ಮಾನ ಮಾಡುತ್ತೇವೆಂದರೆ ಕಾಯದೇ ಇರುತ್ತಾರೆಯೇ?

ಅಧ್ಯಕ್ಷರು: ನಾನು ಈ ಮಧ್ಯದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಈ ಪಾರಂಪರಿಕ ಕಾನೂನು ಇದೆಯಲ್ಲಾ, ನಿಮ್ಮ ಸರ್ಕಾರದಿಂದಲೂ ಒಂದು ಸುತ್ತೋಲೆ ಹೋಗಿದೆ. ಅದಕ್ಕೆ time ಕೊಟ್ಟು ಬಿಟ್ಟಿದ್ದೀರಿ. ನಮ್ಮ ಜಿಲ್ಲಾ ಮಂತ್ರಿಗಳು ಇಲ್ಲೇ ಇದ್ದಾರೆ, awareness camp, training camp, ನಡೆದಿದೆಯೇ? ಪ್ರತಿ ಅರಣ್ಯ ಹಕ್ಕು ಸಮಿತಿಗೆ training ಕೊಡುವ ಕೆಲಸ ಆಯಾ ಊರುಗಳಲ್ಲಿ awareness create ಮಾಡುವ ಕೆಲಸ ಆಗಿದೆಯೇ?

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಆಗಿಲ್ಲ.

ಅಧ್ಯಕ್ಷರು: ಆಗಿಲ್ಲ, ನೀವು ಇಷ್ಟರೊಳಗೆ eviction ಮಾಡಬೇಕೆಂದು ಮಾಡಿದ್ದಾರೆ. ಈಗ ನಾನೇ ನಮ್ಮ ಊರಿನಲ್ಲಿ ತಿರುಗಾಡಿ ಊರಿಗೆಲ್ಲಾ ನಾನೇ

ತರಬೇತಿ ಕೊಡುವ ಕೆಲಸದ ಬಗ್ಗೆ ಮಾಡಿದ್ದೇನೆ. ಏಕೆಂದರೆ ನಾನೇ ಕಡತವನ್ನು ಇಟ್ಟುಕೊಂಡಿದ್ದೇನೆ. ಆಗುಂಬೆ ಹೋಬಳಿಯಲ್ಲಿ 98 ಜನರಿಗೆ ಸಾಗುವಳಿ ಚೀಟಿಯನ್ನು ಕೊಟ್ಟಿಲ್ಲವೇ? ಒಬ್ಬ ತಹಶೀಲ್ದಾರ, ಒಬ್ಬ ಡಿ.ಸಿ., ಒಬ್ಬ ಎ.ಸಿ., ಒಂದೇ ಜಾಗದಲ್ಲಿ ಕುಳಿತು 98 ಜನರಿಗೆ ಹಕ್ಕು ಪತ್ರವನ್ನು ಕೊಟ್ಟರು. ಅಲ್ಲಿ ಒಬ್ಬ Range Officer, statement ಹೇಗಿರಬೇಕೆಂದು ಎಲ್ಲವನ್ನೂ ತಯಾರು ಮಾಡಿ ಕೊಟ್ಟಿದ್ದಾನೆ. ಅಲ್ಲಿ ಮಾಡುವುದಕ್ಕೆ ಸಾಧ್ಯವಿದ್ದರೆ, ಮನಸ್ಸು ಇದ್ದರೆ ಎಲ್ಲಾ ಕಡೆ ಆ ರೀತಿ ಮಾಡಿ ಎಂದು ಸೂಚನೆ ಕೊಡಿ. ಮಲಂದೂರುನಲ್ಲಿ ಯಾವ ರೀತಿ record ಮಾಡಿದ್ದಾರೆ, ಅದೇ ರೀತಿ record ಮಾಡಿ, ಅವರಿಗೆಲ್ಲಾ ಕೊಡಲಿ, ಮತ್ತೆ immediate ಆಗಿ ತರಬೇತಿ ಕೊಟ್ಟು ಅರ್ಜಿ ಕೊಡುವಂಥ ಕೆಲಸ ಮಾಡಿ. ಯಾರು ಅರ್ಜಿಯನ್ನು ಕೊಟ್ಟಿರುತ್ತಾರೆ, ಅವರನ್ನು eviction ಮಾಡಬಾರದೆಂದು ನೀವೇ ಹೇಳಿದ್ದೀರಿ. ಆದರೆ ಅದಾಗುತ್ತಿಲ್ಲ. ನಿಮ್ಮ circular ಅನ್ನು ಮೊನ್ನೆ ಓದಿದ್ದೇನೆ ಇದರ ಬಗ್ಗೆ ಡಿ.ಸಿ.ಗಳಿಗೆ, ಎ.ಸಿ.ಗಳಿಗೆ ಆಸಕ್ತಿ ಇಲ್ಲ.

ಶ್ರೀ ಬಿ. ರಮಾನಾಥ ರೈ: ಮಾನ್ಯ ಅಧ್ಯಕ್ಷರೆ, ಒಂದು ಲಕ್ಷ ಎಪ್ಪತ್ತು ಸಾವಿರ ಅರ್ಜಿಗಳು ಬಂತು.

ಅಧ್ಯಕ್ಷರು: ಯಾವ ಅರ್ಜಿ? ತಾವು ಕುಳಿತುಕೊಳ್ಳಿ, ನಾನು ಹೇಳುತ್ತೇನೆ.

ಶ್ರೀ ಬಿ. ರಮಾನಾಥ ರೈ: ಮಾನ್ಯ ಅಧ್ಯಕ್ಷರೆ, ನಾನು ವಿಷಯ ಹೇಳುತ್ತೇನೆ, ಆಮೇಲೆ ತಾವು ಮಾತನಾಡಿ, ಇಲ್ಲಿ ಏನಾಗಿದೆಯೆಂದರೆ, ಆಂಧ್ರ ಪ್ರದೇಶದಲ್ಲಿ 80% ಪಾರಂಪರಿಕ ವಾಸಿಗಳಿಗೆ ಕೊಟ್ಟಿದೆ, ಕರ್ನಾಟಕದಲ್ಲಿ 16% ಮಾತ್ರ ಆಗಿದೆ. ಅಲ್ಲಿ 80% ಆಗಿದೆ, ಇದಕ್ಕೆ ಯಾರು ಜವಾಬ್ದಾರರು?

ಅಧ್ಯಕ್ಷರು: ಸರ್ಕಾರ.

ಶ್ರೀ ಬಿ.ರಮಾನಾಥ ರೈ: ಅದನ್ನು ಹೇಳಿ, ಮತ್ತೆ ನಾವು ಅರ್ಜಿ ತೆಗೆದುಕೊಂಡು, ಮತ್ತೆ ಅದನ್ನು process ಮಾಡಿ ಕಷ್ಟಪಡುವುದಕ್ಕಿಂತ, ಮೊದಲೇ ಸರಿಯಾದ ರೀತಿಯಲ್ಲಿ facilitate ಮಾಡುವಂಥ ಅವಕಾಶವಿದೆ, ಅದನ್ನು ಮಾಡಿಲ್ಲ. ಸಮಾಜ ಕಲ್ಯಾಣ ಇಲಾಖೆಯು ನೋಡಲ್ ಏಜೆನ್ಸಿಯಾಗಿದೆ. ಅವರು ಜವಾಬ್ದಾರಿಯಿರತಕ್ಕಂಥವರು. ನಮ್ಮ ಮೇಲೆಯೇ

ಬೆರಳು ತೋರಿಸುವುದಕ್ಕಿಂತ ಹೆಚ್ಚಾಗಿ ಆಂಧ್ರ ಪ್ರದೇಶದಲ್ಲಿ 80% ಆಗಿದ್ದು, ನಮ್ಮಲ್ಲಿ 16% ಏಕೆ ಆಯಿತು ಎನ್ನುವ ಪ್ರಶ್ನೆಗೆ ಸರಿಯಾದ ಉತ್ತರ ಸಿಗಲಿ. ಆನಂತರ ಮುಂದಕ್ಕೆ ನಾವು ಮಾತನಾಡುತ್ತೇವೆ. ಈಗ ಬಂದು ನೀವು ಪುನ: ರಿವ್ಯೂ ಮಾಡಿಸಿ, ಅರ್ಜಿಗಳನ್ನು ಮತ್ತೆ ತೆಗೆದುಕೊಳ್ಳಿ ಎಂದರೆ ಅದು ಎಷ್ಟು ಕಷ್ಟವಿದೆ?

(ಗೊಂದಲ)

ಅಧ್ಯಕ್ಷರು: ಏಕೆ ಕಷ್ಟ?

(ಗೊಂದಲ)

ಶ್ರೀ ಬಿ. ರಮಾನಾಥ ರೈ: ಕಷ್ಟವೆಂದು ಅಲ್ಲ. ಅರಣ್ಯ ಹಕ್ಕು ಕಾಯ್ದೆಯಲ್ಲಿ, ನಾವು ಉಪ ಸಮಿತಿಯಲ್ಲಿ ಮತ್ತೆ ಅರ್ಜಿಗಳನ್ನು ತೆಗೆದುಕೊಳ್ಳಬೇಕು ಎಂದು ತೀರ್ಮಾನ ಮಾಡಿದ್ದೇವೆ.

(ಗೊಂದಲ)

ಶ್ರೀ ಸಿ.ಟಿ. ರವಿ: ಬಂಟ್ವಾಳದಲ್ಲಿ ಮಾತನಾಡಬೇಕಾದ ಭಾಷೆಯನ್ನು ವಿಧಾನ ಸಭೆಯಲ್ಲಿ ಮಂತ್ರಿಯಾಗಿ ಮಾತನಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ಸ್ವಲ್ಪ ತಾಳಿರಿ ಮಹರಾಯರೇ, ಸುಮ್ಮನೆ ಕೆಲಸಕ್ಕೆ ಬಾರದ ಮಾತುಗಳನ್ನೆಲ್ಲ ಹೇಳುತ್ತೀರಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ: ಅರಣ್ಯ ಹಕ್ಕು ಕಾಯ್ದೆಯಲ್ಲಿ ನಾವು ಮೀಟಿಂಗ್ ಮಾಡಿ, ಇದು ತಪ್ಪಾಗಿದೆ, ಹೊಸದಾಗಿ ತೆಗೆದುಕೊಳ್ಳಬೇಕು ಎಂದು ಪ್ರಥಮ ಸಭೆಯಲ್ಲೇ ತೀರ್ಮಾನ ಮಾಡಿದೆವು. ದೇಶಪಾಂಡೆಯವರೂ ಇದ್ದರು. ಹಿಂದೆ ಏಕೆ ಆಗಿಲ್ಲ ಎಂದು ನಾನು ಪ್ರಶ್ನೆ ಮಾಡುತ್ತಿದ್ದೇನೆ. ಅಫಿಡವಿಟ್ ಸಲ್ಲಿಸಿದ್ದಾರೆ, ಅದು ನಿಜವಾದರೆ ನೀವು ರಾಜೀನಾಮೆ ಕೊಡುತ್ತೀರಾ ಎಂದು

ಸಿ.ಟಿ. ರವಿಯವರು ಹೇಳುತ್ತಾರೆ. ಇಲ್ಲ ಎಂದು ನಾನು ಹೇಳುತ್ತಿದ್ದೇನೆ. ಹಾಗಿದ್ದರೆ ನೀವು ರಾಜೀನಾಮೆ ಕೊಡುವಿರಾ?

(ಗೊಂದಲ)

ಶ್ರೀ ಸಿ.ಟಿ. ರವಿ: Yes, I commit, ನಾನು ಕೊಡುತ್ತೇನೆ. ನಾನು commit ಆಗಿದ್ದೇನೆ, ನೀವು commit ಆಗುವಿರಾ?

ಶ್ರೀ ಬಿ. ರಮಾನಾಥ ರೈ: ತನ್ನಿ, ನಾನೂ ಕಮಿಟ್ ಆಗಿದ್ದೇನೆ.

(ಗೊಂದಲ)

ಅಧ್ಯಕ್ಷರು: ರವಿಯವರೇ, ಏನಿದು ಚರ್ಚೆ?

ಶ್ರೀ ಸಿ.ಟಿ. ರವಿ: ಅಕ್ಟೋಬರ್ 4, 2013ರಂದು ಅಫಿಡವಿಟ್ ಹಾಕಿದ್ದಾರೆ.

ಶ್ರೀ ಬಿ. ರಮಾನಾಥ ರೈ: ಸಿ.ಟಿ. ರವಿ ಹೇಗೆ, ರಮಾನಾಥ ರೈ ಹೇಗೆ ಎನ್ನುವುದು ಜನರಿಗೆ ಗೊತ್ತಿದೆ.

(ಗೊಂದಲ)

ಶ್ರೀ ಬಿ. ರಮಾನಾಥ ರೈ: ರಮಾನಾಥ ರೈ ಇತಿಹಾಸ ಏನು, ಸಿ.ಟಿ. ರವಿ ಇತಿಹಾಸ ಏನು ಎನ್ನುವುದೆಲ್ಲ ಬರಲಿ ಇಲ್ಲ. ನಮ್ಮ ಅಪ್ಪ ಹೇಗಿದ್ದರು, ನಿಮ್ಮ ಅಪ್ಪ ಹೇಗಿದ್ದರು, ನಿಮ್ಮ ಹಿರಿಯರು ಹೇಗಿದ್ದರು ಎನ್ನುವುದೆಲ್ಲ ಚರ್ಚೆ ನಡೆಯಲಿ

(ಗೊಂದಲ)

ಶ್ರೀ ಸಿ.ಟಿ. ರವಿ: ಸುಪ್ರೀಂ ಕೋರ್ಟಿಗೆ ಅಫಿಡವಿಟ್ ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು: ಏನು ಮಾತನಾಡುತ್ತೀರಿ?

(ಗೊಂದಲ)

ಶ್ರೀ ಸಿ.ಟಿ. ರವಿ: ಅಕ್ಟೋಬರ್ 4, 2013ರಂದು ಅಡಿಷನಲ್ ಸಾಲಿಸಿಟರ್ ಜನರಲ್‌ರವರು ಸುಪ್ರೀಂ ಕೋರ್ಟಿಗೆ ಅಡಿಕೆ ವಿಷ ವಸ್ತು ಎಂದು ಅಫಿಡವಿಟ್ ಕೊಟ್ಟಿದ್ದಾರೆ. ಅವರು ಇಲ್ಲ ಎಂದು ಹೇಳಿದ್ದಾರೆ.

ಅಧ್ಯಕ್ಷರು: ಅದನ್ನು ನನಗೆ ಡಾಕ್ಯುಮೆಂಟ್‌ನಲ್ಲಿ ತೋರಿಸಿ.

ಶ್ರೀ ಸಿ.ಟಿ. ರವಿ: ಅಫಿಡವಿಟ್ ಕೊಟ್ಟಿದ್ದರೆ ರಾಜೀನಾಮೆ ಕೊಡುತ್ತೇನೆ ಎಂದು ಹೇಳಿದ್ದಾರೆ, ಅದನ್ನು ರೆಕಾರ್ಡ್ ಮಾಡಿಸಿ.

ಅಧ್ಯಕ್ಷರು: ಯಾವ್ಯಾವುದಕ್ಕೋ ಎಲ್ಲೋ ಹೋಗಬೇಡಿ. ಸುಮ್ಮನೆ ಕೆಲಸ ಮಾಡಿ, ಮಾತನಾಡಬೇಡಿ.

ಶ್ರೀ ಸಿ.ಟಿ. ರವಿ: ಅವರೂ ರಾಜೀನಾಮೆ ಕೊಡುತ್ತೇನೆ ಎಂದು ಹೇಳಿದ್ದಾರೆ.

ಅಧ್ಯಕ್ಷರು: ಅವರು ಏಕೆ ರಾಜೀನಾಮೆ ಕೊಡುತ್ತಾರೆ?

ಶ್ರೀ ಸಿ.ಟಿ. ರವಿ: ನಾನು ಸುಳ್ಳು ಹೇಳಿದ್ದರೆ ನಾನು ರಾಜೀನಾಮೆ ಕೊಡುತ್ತೇನೆ. ಅಫಿಡವಿಟ್ ಕೊಟ್ಟಿದ್ದಾರೆ ಎಂದಾದರೆ ಅವರು ಕೊಡಲಿ.

ಅಧ್ಯಕ್ಷರು: ಇಲ್ಲಿ ಯಾರೂ ಸುಳ್ಳು, ಸತ್ಯವನ್ನು ಪರೀಕ್ಷೆ ಮಾಡಲು ಬಂದಿಲ್ಲ.

ಶ್ರೀ ಆರ್. ಅಶೋಕ್: ಇಲ್ಲಿ ಸಾಗುವಳಿ ವಿಚಾರ ಚರ್ಚೆಯಾಗುತ್ತಿದೆ. ಅದನ್ನು ತೆರವುಗೊಳಿಸುತ್ತಿದ್ದರೆ ಅದನ್ನು ತಡೆಯುವಂಥ ಪ್ರಯತ್ನ ಮಾಡಬೇಕು. ಇದು ರೈತರ ಸಮಸ್ಯೆ. ವೈಯಕ್ತಿಕವಾಗಿ ಹೋಗುವುದು ಬೇಡ.

(ಗೊಂದಲ)

ಶ್ರೀ ಬಿ. ರಮಾನಾಥ ರೈ: ನಾನು ಬಂಟ್ವಾಳದ ಭಾಷೆ ಮಾತನಾಡಿದೆ ಎಂದು ಹೇಳಿದರಲ್ಲ, ಸಿ.ಟಿ. ರವಿಯವರು ಚಿಕ್ಕಮಗಳೂರು ಭಾಷೆ ಮಾತನಾಡಿದರೇ?

ಅಧ್ಯಕ್ಷರು: ಆಯಿತು, ಸಾಕು ಬಿಡಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಒಂದು ವಸ್ತುಸ್ಥಿತಿಯನ್ನು ನಾವು ಇಲ್ಲಿ ಹೇಳಲೇಬೇಕಾಗುತ್ತದೆ. 2007ರಲ್ಲಿ ಅಫಿಡವಿಟ್ ಹಾಕಿದ್ದಾರೆ ಅಥವಾ ಅದು ಸುಪ್ರೀಂ ಕೋರ್ಟಿನ ಗಮನಕ್ಕೆ ಹೋಗಿದೆ ಎಂದು ಇಲ್ಲಿ ಪದೇಪದೇ ಚರ್ಚೆಯಾಗುತ್ತಿದೆ. 2007ರಲ್ಲಿ ಅಧಿಕಾರದಲ್ಲಿ ಯಾರಿದ್ದರು ಎಂದು ನೀವೇ ಯೋಚನೆ ಮಾಡಿ. ಅದೆಲ್ಲದಕ್ಕಿಂತ ಹೆಚ್ಚಾಗಿ, ನಾವು ಸುಪ್ರೀಂ ಕೋರ್ಟಿಗೆ ಫೈಲ್ ಮಾಡಿದಂಥ ಸಂದರ್ಭದಲ್ಲಿ ಸಿಂಘ್ವಿ ಅವರ ಕೋರ್ಟ್ ಮುಂದೆ ಹಿಯರಿಂಗ್ ಆಯಿತು. ಅವರು ರಿಟೈರ್ ಆದರು. ಆ ಫೈಲ್ ಅಲ್ಲೇ ಇದೆ. ನಾವು ಒಬ್ಬರು ಸ್ಪೆಷಲ್ ಅಡ್ವೊಕೇಟ್‌ಅನ್ನು ಅಪಾಯಿಂಟ್ ಮಾಡಿ, ಸುಪ್ರೀಂ ಕೋರ್ಟ್‌ನಲ್ಲಿ ಏನಾಗಿದೆ ಎಂದು ಆ ಫೈಲ್‌ಅನ್ನು ತೆಗೆಸಬೇಕು ಎಂದು ಪ್ರಯತ್ನ ಪಟ್ಟಿದ್ದು ಇನ್ನೂ ಕೂಡ ಆ ಕಡತ ವಾಪಸ್ಸು ಬಂದಿಲ್ಲ. ಈಗ ಅದು ಇನ್ನೊಬ್ಬರು ಜಡ್ಜ್‌ಗೆ ವರ್ಗಾವಣೆಯಾಗಿದೆ. ಅದು ಹಿಯರ್ ಆಗುವವರೆಗೂ ನಮಗೆ ಸಿಗುವುದಿಲ್ಲ. ಏನು ಸ್ಥಿತಿ ಇದೆ ಎನ್ನುವ ಮಾಹಿತಿ ಕೂಡ ನಮಗೆ ಇದೆ, ಅದರಲ್ಲಿ ನಾವು ಆತಂಕಪಟ್ಟುಕೊಳ್ಳಬೇಕಾದ ವಿಚಾರಗಳೇನೂ ಇಲ್ಲ. ಸುಪ್ರೀಂ ಕೋರ್ಟಿನಲ್ಲಿ ಪೆಂಡಿಂಗ್ ಇರುವುದರಿಂದ ಪದೇಪದೇ ಅದನ್ನು ಚರ್ಚೆ ಮಾಡುವುದು ಬೇಡ ಎನ್ನುವ ಹಿನ್ನೆಲೆಯಲ್ಲಿ ನಾನು ಹೇಳುತ್ತಿದ್ದೇನೆ. ಅದನ್ನು ಅಷ್ಟಕ್ಕೇ ಬಿಡೋಣ. ಅದಕ್ಕೆ ಯಾರೂ ರಾಜೀನಾಮೆ ಕೊಡುವ ಪ್ರಶ್ನೆಯಿಲ್ಲ. ಲಾಯರ್‌ಗಳಿದ್ದಾರೆ, ನಾವು ಅದನ್ನು ಫೈಟ್ ಮಾಡುತ್ತೇವೆ, ಅದರಲ್ಲೇನೂ ತೊಂದರೆಯಿಲ್ಲ.

ಅಧ್ಯಕ್ಷರು: ನೀವು ಕೊಟ್ಟ ಉತ್ತರ ಸಮರ್ಪಕವಾಗಿದೆ. ದಯವಿಟ್ಟು ಬಿಚ್ಚು ಮನಸ್ಸಿನಿಂದ ಒಂದು ತೀರ್ಮಾನ ಮಾಡಿ ರೈತರಿಗೆ ನ್ಯಾಯ ಕೊಡುವಂಥ ಕೆಲಸ ಮಾಡಿ.

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು): ಅರಣ್ಯ ಹಕ್ಕು ಕಾಯಿದೆ ಬಗ್ಗೆ ವ್ಯಾಪಕವಾಗಿ ಪ್ರಚಾರ ಮಾಡಿ, ಜನರಲ್ಲಿ ಜಾಗೃತಿ ಮೂಡಿಸಲು ಜಿಲ್ಲಾಧಿಕಾರಿಗಳು, ಸಿ.ಇ.ಓ., ತಹಶೀಲ್ದಾರ್ ಮತ್ತು ಅಸಿಸ್ಟೆಂಟ್ ಕಮಿಷನರ್‌ಗಳು ಗ್ರಾಮಸಭೆಗಳನ್ನು ಮಾಡಬೇಕು. ಗ್ರಾಮಸಭೆಗಳನ್ನು ಮಾಡಿ, ಯಾರಾದರೂ ಅರ್ಜಿ ಹಾಕಿಲ್ಲ

ಎಂದರೆ ಅವರಿಂದ ಅವತ್ತೇ ಅರ್ಜಿ ತೆಗೆದುಕೊಳ್ಳಬೇಕು ಎಂದೂ ಕೂಡ ನಾವು ಹೇಳಿದ್ದೇವೆ. ಸಾಕಷ್ಟು ಸರ್ಕ್ಯುಲರ್‌ಗಳನ್ನು ಕಳುಹಿಸಿದ್ದೇವೆ, ಸಾಕಷ್ಟು ಕೈಪಿಡಿಗಳನ್ನೂ ಕೂಡ ಮಾಡಿದ್ದೇವೆ. ಅದರ ಪ್ರಚಾರಕ್ಕೂ ಕೂಡ ನಾವು ಹಣವನ್ನು ಕೊಟ್ಟಿದ್ದೇವೆ. ಎನ್.ಜಿ.ಓ.ಗಳ ಮೂಲಕ ಇದರ ಬಗ್ಗೆ ಅವೇರ್‌ನೆಸ್ ಕ್ರಿಯೇಟ್ ಮಾಡುವುದಕ್ಕೆ ಕೂಡ ನಾವು ಹಣವನ್ನು ಕೊಟ್ಟಿದ್ದೇವೆ. ತಾವು ಯಾವ ಮಾದರಿಯಲ್ಲಿ ಮಾಡಿದ್ದೀರಿ ಅದನ್ನು ನಾವು ನೋಡಿಕೊಂಡು ಅದೇ ಮಾದರಿಯಲ್ಲಿ ಮಾಡಬೇಕು ಎಂದು ಇತರ ಜಿಲ್ಲಾಧಿಕಾರಿಗಳಿಗೆ ಒಂದು ನಿರ್ದೇಶನವನ್ನು ಕೊಟ್ಟು, ಯಾರ್‍ಯಾರು ಅರಣ್ಯ ಹಕ್ಕು ಕಾಯಿದೆಯೊಳಗೆ ಬರುತ್ತಾರೆ ಅವರಿಗೆ ಮಾಡಿಕೊಡುತ್ತೇವೆ. ಇವತ್ತೂ ಮೀಟಿಂಗ್ ಇದೆ.

ಶ್ರೀ ಬಿ. ರಮಾನಾಥ ರೈ: ಕ್ಯಾಬಿನೆಟ್ ಸಬ್ ಕಮಿಟಿಯ ಪ್ರಥಮ ಸಭೆಯಲ್ಲೇ ಮತ್ತೆ ಅರ್ಜಿಗಳನ್ನು ಸ್ವೀಕಾರ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಕೆಲವು ಜಿಲ್ಲೆಗಳಲ್ಲಿ ಶುರು ಮಾಡಿದ್ದಾರೆ. ನಾನು ಹೇಳುತ್ತಿರುವುದೇನೆಂದರೆ, ಕಳೆದ ಸಾಲಿನಲ್ಲಿ 16% ಮಾತ್ರ ಆಗಿದೆ. ಆಂಧ್ರ ಪ್ರದೇಶದಲ್ಲಿ 80% ಆಗಿದೆ. ಅದನ್ನು ಸರಿಪಡಿಸಬೇಕು ಎಂದು ನಾವು ತೀರ್ಮಾನ ತೆಗೆದುಕೊಂಡಿದ್ದೇವೆ.

ಶ್ರೀ ಹೆಚ್. ಆಂಜನೇಯ: ಅವರು ಮಾಡದಿರುವುದರಿಂದ ನಮಗೆ ಮಾಡುವಂಥ ಅವಕಾಶ ಸಿಕ್ಕಿದೆ. ನಾವು ಮಾಡೋಣ. ಅದು ನಮ್ಮ ಪುಣ್ಯ. ಮುಂಚಿನಿಂದಲೂ ನಮ್ಮ ಪಾರ್ಟಿಯವರು ಮಾಡುತ್ತಾ ಬಂದಿದ್ದೇವೆ. ಈಗಲೂ ಆ ಕೆಲಸವನ್ನು ಕಾಯಾ, ವಾಚಾ, ಮನಸಾ ಮಾಡುತ್ತೇವೆ. ಹಿಂದೆ ಮಾಡಿದ್ದಾರಲ್ಲ, ಅದೇ ಮಾದರಿಯಲ್ಲಿ ನಾವು ಮಾಡಿಸುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಏಳೂವರೆಯಾಯಿತು. ಉಳಿದಿರುವ ಬೇರೆ ವಿಷಯಗಳನ್ನು ತರಾತುರಿಯಲ್ಲಿ ತೆಗೆದುಕೊಳ್ಳುವ ಪ್ರಶ್ನೆಯಿಲ್ಲ. ಹೇಗೂ ನಾವು ಫೆಬ್ರವರಿ 14ನೇ ತಾರೀಖು ಭೇಟಿಯಾಗುತ್ತಿದ್ದೇವೆ. ಆಗಲೂ ಕೂಡ ಆ ವಿಷಯಗಳನ್ನು ತೆಗೆದುಕೊಳ್ಳಬಹುದು. ಕಂಟಿನ್ಯುಯಿಟಿ ಇರುತ್ತದೆ, ತೆಗೆದುಕೊಳ್ಳಲು ಬರುತ್ತದೆ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ: ಮಾನ್ಯ ಅಧ್ಯಕ್ಷರೆ, ಖಾಸಗಿ ನಿರ್ಣಯಗಳನ್ನು ಮಂಡಿಸಲು ಅವಕಾಶ ಮಾಡಿಕೊಡಬೇಕು.

14. ಚುನಾವಣಾ ಪ್ರಸ್ತಾವ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು): ದಿನಾಂಕ 27-01-2014 ರಂದು ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಸಿಂಡಿಕೇಟ್‌ಗೆ ಒಬ್ಬ ಸದಸ್ಯರನ್ನು ಚುನಾಯಿಸಲು ಚುನಾವಣಾ ಪ್ರಸ್ತಾವವನ್ನು ಮಂಡಿಸಿದ್ದು, ಚುನಾವಣಾ ಕಾರ್ಯಕ್ರಮ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಅದರಂತೆ ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಸಿಂಡಿಕೇಟ್‌ಗೆ ಒಬ್ಬ ಸದಸ್ಯರನ್ನು ನಾಮನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಕರ್ನಾಟಕ ರಾಜ್ಯ ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಸಿಂಡಿಕೇಟ್‌ಗೆ ಒಬ್ಬ ಸದಸ್ಯರನ್ನು ನಾಮನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ನೀಡಲು ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು ಮಂಡಿಸಿದ ಪ್ರಸ್ತಾವಕ್ಕೆ ಸದನದ ಸಹಮತಿ ಇದೆ ಎಂದು ಭಾವಿಸಲಾಗಿದೆ.